ಸಂಪುಟ : 11 ಸಂಚಿಕೆ: 43 ಪುಟ : 4+2 ಬೆಲೆ: 3.00 ಸೋಮವಾರ ಮಾರ್ಚ್ 16 2026 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA ಕನ್ನಡ ದಿನಪತ್ರಿಕೆ




Volume : 11 Issue : 43 Pages : 4+2 Price : 3.00 Monday March 16 2026 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಕಳಸಾಪುರದಲ್ಲಿ ಈಶ್ವರ ಬಸವಣ್ಣ ದೇವರ ಜಾತ್ರಾ ಮಹೋತ್ಸವ – ಸರ್ವಧರ್ಮ ಸಾಮೂಹಿಕ ವಿವಾಹ

■ ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನ ಕಳಸಾಪುರ ಗ್ರಾಮದಲ್ಲಿ ಜಾತ್ರಾ ಮಹೋತ್ಸವದ ರೂವಾರಿ ಲಿಂ. ಶ್ರೀಪಾದಯ್ಯ ಇಟಗಿಮಠ ಅವರ ಸ್ಮರಣಾರ್ಥವಾಗಿ ಗ್ರಾಮದ ಈಶ್ವರ ಬಸವಣ್ಣ ದೇವರ 16ನೇ ವರ್ಷದ ಜಾತ್ರಾ ಮಹೋತ್ಸವ ನಡೆಯಲಿದೆ. ಇದರ ಅಂಗವಾಗಿ ಶಿವಶರಣೆ ಗುಡ್ಡಾಪುರ ಶ್ರೀ ದಾನಮ್ಮ ದೇವಿ ಪುರಾಣ ಮಂಗಲೋತ್ಸವ, ಸರ್ವಧರ್ಮ ಸಾಮೂಹಿಕ ವಿವಾಹ ಮಹೋತ್ಸವ ಹಾಗೂ ಮಹಾರಥೋತ್ಸವ ಜರುಗಲಿವೆ. ಮಾ. 19 ರಂದು ಬೆಳಿಗ್ಗೆ 11.30ಕ್ಕೆ ಸರ್ವಧರ್ಮ ಸಾಮೂಹಿಕ ವಿವಾಹ ಮಹೋತ್ಸವ, ಸಂಜೆ 5.30ಕ್ಕೆ ಮಹಾರಥೋತ್ಸವ ಹಾಗೂ ರಾತ್ರಿ 10.30ಕ್ಕೆ "ರೈತನ ತಾಕತ್ತು ಸರ್ಕಾರಕ್ಕೇನು ಗೊತ್ತು" ನಾಟಕ ಪ್ರದರ್ಶನ ನಡೆಯಲಿದೆ. ಮಾ. 20 ರಂದು ಸಂಜೆ 5.30ಕ್ಕೆ ಲಘು ರಥೋತ್ಸವ ಜರುಗಲಿದೆ. ಸಾಮೂಹಿಕ ವಿವಾಹ ಕಾರ್ಯಕ್ರಮದ ಪಾವನ ಸಾನಿಧ್ಯವನ್ನು ಬೆಂಗಳೂರು ಜಿಲ್ಲೆಯ ಶಿವಗಂಗಾ ಸುಕ್ಷೇತ್ರದ ಪೂಜ್ಯಶ್ರೀ ಮಲಯ ಶಾಂತಮುನಿ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸುವರು. ಜ್ಯುಕ್ತಿ ಹಿರೇಮಠದ ಪೂಜ್ಯಶ್ರೀ ಕೊಟ್ಟೂರು ಶಿವಾಚಾರ್ಯ ಮಹಾಸ್ವಾಮಿಗಳು, ಮಣಕವಾಡ ಶ್ರೀ ಗುರು ಅನ್ನದಾನೇಶ್ವರ ದೇವಮಂದಿರ ಮಹಾಮಠದ ಪೂಜ್ಯಶ್ರೀ ಅಭಿನಯ ಮೃತ್ಯುಂಜಯ ಮಹಾಸ್ವಾಮಿಗಳು, ಓಂಕಾರಗಿರಿ ಓಂಕಾರೇಶ್ವರ ಮಠದ ಪೂಜ್ಯಶ್ರೀ ಫಕೀರೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಸೇರಿದಂತೆ ಅನೇಕ ಗಣ್ಯರು ಸಾನಿಧ್ಯ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್. ಕೆ. ಪಾಟೀಲ ಅಧ್ಯಕ್ಷತೆ ವಹಿಸಲಿದ್ದು, ಲಕ್ಷ್ಮೇಶ್ವರದ ಯುವ ಮುಖಂಡ ಆನಂದಯ್ಯಸ್ವಾಮಿ ಗಡ್ಡದೇವರಮಠ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಾಜಿ ಸಚಿವ ಎಸ್. ಎಸ್. ಪಾಟೀಲ, ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ, ಮಾಜಿ ಶಾಸಕ ಡಿ.ಆರ್. ಪಾಟೀಲ ಸೇರಿದಂತೆ ಹಲವು ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಅದೇ ದಿನ ಮಧ್ಯಾಹ್ನ 12 ಗಂಟೆಗೆ ಪೂಜ್ಯಶ್ರೀ ಶಿವಶಾಂತವೀರ ಶರಣರ ತುಲಾಭಾರ ಸೇವೆ ನಡೆಯಲಿದೆ. ಈ ಸೇವೆಯನ್ನು ಲಿಂ. ನಿಂಗಯ್ಯಸ್ವಾಮಿ ಮಾತೋಶ್ರೀ ಸಾವಿತ್ರಮ್ಮ ಇಟಗಿಮಠ ಅವರ ಕುಟುಂಬದವರು ವಹಿಸಿಕೊಂಡಿದ್ದಾರೆ. ಕಾರ್ಯಕ್ರಮವನ್ನು ಶಿವಲಿಂಗ ಸ್ವಾಮಿಗಳು ಹಿರೇಮಠ ಸಿದ್ದಾಪುರ ನಿರೂಪಿಸಲಿದ್ದಾರೆ ಎಂದು ಜಾತ್ರಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

### ಸೋಮೇಶ್ವರ ದೇವಸ್ಥಾನದ ಉತ್ತರ ಮಹಾದ್ವಾರ ದುರಸ್ತಿಗೆ ಭೂಮಿಪೂಜೆ ನೆರವೇರಿಸಿದ ಸಚಿವ ಹೆಚ್ ಕೆ ಪಾಟೀಲ

# ಪಾವಿತ್ರ್ಯ, ಸ್ವಚ್ಛತೆ ಕಾಪಾಡುವುದು ಎಲ್ಲರ ಜವಾಬ್ದಾರಿ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ದೇವಸ್ಥಾನಗಳು ನಮ್ಮ ನೆಲದ ಶ್ರೀಮಂತ ಪರಂಪರೆ, ಇತಿಹಾಸ ಹಾಗೂ ಸಂಸ್ಕೃತಿಯ ಪ್ರತೀಕವಾಗಿದ್ದು, ಅವುಗಳ ಪಾವಿತ್ರ್ಯತೆ ಮತ್ತು ಸ್ವಚ್ಛತೆ ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಪ್ರವಾಸೋದ್ಯಮ ಸಚಿವ ಹೆಚ್. ಕೆ. ಪಾಟೀಲ ಹೇಳಿದರು.

ಭಾನುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಗದಗ, ಪ್ರವಾಸೋದ್ಯಮ ಇಲಾಖೆ ಬೆಂಗಳೂರು ಹಾಗೂ ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಮೈಸೂರು ಇವರ ಸಹಯೋಗದಲ್ಲಿ ಶ್ರೀ ಸೋಮೇಶ್ವರ ದೇವಸ್ಥಾನದ ಉತ್ತರ ಮಹಾದ್ವಾರದ ಸಂರಕ್ಷಣಾ ಕಾಮಗಾರಿಯ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.



ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಗೆ ಸೇರಿದ ಸೋಮೇಶ್ವರ ದೇವಸ್ಥಾನದ ಸಂರಕ್ಷಣೆಗೆ 2.40 ಕೋಟಿ ರೂ. ಅನುದಾನ ಮಂಜೂರಾಗಿದ್ದು, ದೇವಾಲಯದ ಸಮಗ್ರ ಅಭಿವೃದ್ಧಿಗೆ ಅಗತ್ಯವಿರುವ ಹೆಚ್ಚುವರಿ ಅನುದಾನ ತರಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದರು.

ದೇವಾಲಯದ ಸುತ್ತಲೂ ದನಗಳ ಕೊಟ್ಟಿಗೆ, ತಿಪ್ಪೆಗುಡ್ಡೆ, ಬಣವಿ ಹಾಗೂ ಶೌಚಗೃಹಗಳು ಇರುವುದರಿಂದ ಪರಿಸರ ಹಾನಿಯಾಗುತ್ತಿದೆ. ದೇವಾಲಯದ ಅಭಿವೃದ್ಧಿಗೆ ಅಗತ್ಯವಾದ ಜಾಗವನ್ನು ದೊರಕಿಸಿದರೆ, ಅವರಿಗೆ ಸರ್ಕಾರದಿಂದ ಬದಲಿ ಜಾಗ ಹಾಗೂ ಅಗತ್ಯ ಸೌಲಭ್ಯ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಪಂಪ ಕವಿಯ ಕರ್ಮಭೂಮಿ ತಿರುಳ್ಗನ್ನಡ ನಾಡಾದ ಪುಲಿಗೆರೆಯ ಸೋಮೇಶ್ವರನ ನೆಲೆವೀಡು ಲಕ್ಷ್ಮೇಶ್ವರ ಈ ನೆಲದ ಸಾಂಸ್ಕೃತಿಕ ಶ್ರೀಮಂತಿಕೆಯ ಪ್ರಮುಖ ಕೇಂದ್ರವಾಗಿದೆ. ದೇವಾಲಯದ ಉತ್ತರ ಮಹಾದ್ವಾರದ ದುರಸ್ತಿ, ಜಲನಿರೋಧಕ ಹೊದಿಕೆ, ಮೇಲ್ಚಾವಣಿ ದುರಸ್ತಿ ಸೇರಿದಂತೆ ಒಟ್ಟು 12 ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಸಾನಿಧ್ಯ ವಹಿಸಿದ್ದ ಮುಕ್ತಿಮಂದಿರದ ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಗದಗ ಜಿಲ್ಲೆ ಐತಿಹಾಸಿಕ ಮತ್ತು ಧಾರ್ಮಿಕವಾಗಿ ಪ್ರಸಿದ್ಧವಾಗಿದೆ. ಸೋಮೇಶ್ವರ ದೇವಾಲಯದ ಸುತ್ತಲಿನ ಮನೆ ಮಾಲೀಕರು ದೇವಾಲಯದ ಅಭಿವೃದ್ಧಿಗೆ ಜಾಗ ಒದಗಿಸಿದರೆ ಇನ್ನಷ್ಟು ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ, ಉಪವಿಭಾಗಾಧಿಕಾರಿ ಎಂ. ಗಂಗಪ್ಪ, ಮಾಜಿ ಶಾಸಕರಾದ ಜಿ.ಎಸ್. ಗಡ್ಡದೇವರಮಠ, ರಾಮಣ್ಣ ಲಮಾಣಿ, ರಾಮಕೃಷ್ಣ ದೊಡ್ಡಮನಿ, ಕೆಪಿಸಿಸಿ ಕಾರ್ಯದರ್ಶಿ ಸುಜಾತಾ ದೊಡ್ಡಮನಿ, ಗ್ಯಾರಂಟಿ ಸಮಿತಿ ಅಧ್ಯಕ್ಷ ನಾಗರಾಜ ಮಡಿವಾಳರ, ಯುವ ಮುಖಂಡ ಆನಂದ ಗಡ್ಡದೇವರಮಠ, ಸೋಮೇಶ್ವರ ಭಕ್ತರ ಟ್ರಸ್ಟ್ ಅಧ್ಯಕ್ಷ ಗುರುರಾಜ ಪಾಟೀಲಕುಲಕರ್ಣಿ, ಅರ್ಚಕರ ಸಮಿತಿ ಅಧ್ಯಕ್ಷ ದಿಗಂಬರ ಪೂಜಾರ, ಜಾತ್ರಾ ಸಮಿತಿ ಅಧ್ಯಕ್ಷ ಕುಬೇರಪ್ಪ ಮಹಾಂತಶೆಟ್ಟರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

> "ದೇವಸ್ಥಾನಗಳು ನಮ್ಮ ಸಂಸ್ಕೃತಿ, ಇತಿಹಾಸದ ಪ್ರತೀಕಗಳು. ಅವುಗಳ ಪಾವಿತ್ರ್ಯತೆ ಹಾಗೂ ಸ್ವಚ್ಛತೆ ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿ."
> – **ಹೆಚ್.ಕೆ. ಪಾಟೀಲ,** ಪ್ರವಾಸೋದ್ಯಮ ಸಚಿವ

**ಸೋಮೇಶ್ವರ ದೇವಸ್ಥಾನದಲ್ಲಿ ಕೈಗೊಳ್ಳಲಿರುವ ಕಾಮಗಾರಿಗಳು**

1) ಉತ್ತರ ಮಹಾದ್ವಾರದ ಸಂರಕ್ಷಣಾ ಕಾಮಗಾರಿ
2) ದೇವಾಲಯದ ಮೇಲ್ಚಾವಣಿ ದುರಸ್ತಿ
3) ಜಲ ನಿರೋಧಕ ಹೊದಿಕೆ ಅಳವಡಿಕೆ
4) ದೇವಾಲಯದ ಸುತ್ತಲಿನ ಪ್ರದೇಶದ ಅಭಿವೃದ್ಧಿ
5) ಒಟ್ಟು 12 ಕಾಮಗಾರಿಗಳಿಗೆ 2.40 ಕೋಟಿ ರೂ. ಅನುದಾನ

### ಡಿಬಿಎಫ್‌ಓಟಿ ಯೋಜನೆಗೆ ಸಚಿವ ಎಚ್.ಕೆ. ಪಾಟೀಲ ಚಾಲನೆ

# ವೈಜ್ಞಾನಿಕ ತ್ಯಾಜ್ಯ ವಿಲೇವಾರಿಯಿಂದ ಸ್ವಚ್ಛ-ಹಸಿರು ಗದಗ ನಿರ್ಮಾಣ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ಸಮರ್ಪಕವಾಗಿ ನಿರ್ವಹಿಸುವ ಉದ್ದೇಶದಿಂದ ನಿರ್ಮಿಸಲಾಗುತ್ತಿರುವ ಘನ ತ್ಯಾಜ್ಯ ನಿರ್ವಹಣಾ ಘಟಕದ ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯನಿರ್ವಹಣೆ ಹಾಗೂ ಹಸ್ತಾಂತರ (DBFOT) ಯೋಜನೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ ಅವರು ಭಾನುವಾರ ನಗರದ ಬಳಗಾನೂರು ರಸ್ತೆಯಲ್ಲಿರುವ ತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಚಾಲನೆ ನೀಡಿದರು.

ನಗರಾಭಿವೃದ್ಧಿ ಇಲಾಖೆ, ಜಿಲ್ಲಾಡಳಿತ, ನಗರಾಭಿವೃದ್ಧಿ ಕೋಶ ಗದಗ ಹಾಗೂ ಗದಗ-ಬೆಟಗೇರಿ ನಗರಸಭೆ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ನಗರಗಳಲ್ಲಿ ಜನಸಂಖ್ಯೆ ವೇಗವಾಗಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ತ್ಯಾಜ್ಯವನ್ನು ವೈಜ್ಞಾನಿಕವಾಗಿ ನಿರ್ವಹಿಸುವುದು ಅತ್ಯಂತ ಅಗತ್ಯವಾಗಿದೆ ಎಂದು ಹೇಳಿದರು. ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡುವುದರಿಂದ ಪರಿಸರ ಸಂರಕ್ಷಣೆಗೂ ಹಾಗೂ ಸಾರ್ವಜನಿಕರ ಆರೋಗ್ಯ ಕಾಪಾಡುವುದಕ್ಕೂ ಸಹಕಾರಿಯಾಗುತ್ತದೆ ಎಂದು ತಿಳಿಸಿದರು.




ಗದಗ-ಬೆಟಗೇರಿ ಅವಳಿ ನಗರಕ್ಕೆ ಇದು ಮೊದಲ ಸಮಗ್ರ ಘನ ತ್ಯಾಜ್ಯ ನಿರ್ವಹಣಾ ಯೋಜನೆಯಾಗಿದ್ದು, ಸ್ವಚ್ಛ ಹಾಗೂ ಪರಿಸರ ಸ್ನೇಹಿ ನಗರ ನಿರ್ಮಾಣಕ್ಕೆ ಇದು ಮಹತ್ವದ ಹೆಜ್ಜೆಯಾಗಲಿದೆ ಎಂದು ಹೇಳಿದರು.

ಈ ಯೋಜನೆಯಡಿ ಸರ್ಕಾರ ಮೂಲಸೌಕರ್ಯ ಒದಗಿಸುವುದರ ಜೊತೆಗೆ ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಘಟಕ ನಿರ್ಮಿಸಿ ನಿರ್ವಹಿಸುವ ವ್ಯವಸ್ಥೆ ಜಾರಿಯಲ್ಲಿದೆ. ನಗರಸಭೆಯ 25 ಎಕರೆ ಪ್ರದೇಶದಲ್ಲಿರುವ ತ್ಯಾಜ್ಯ ವಿಲೇವಾರಿ ಘಟಕದಲ್ಲಿ 5 ಎಕರೆ ಜಾಗವನ್ನು ಡಿಬಿಎಫ್‌ಓಟಿ ಆಧಾರಿತ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ 'ಎನ್ವಿರೋಟೆಕ್ ಸೊಲ್ಯೂಷನ್ಸ್' ಸಂಸ್ಥೆಗೆ ಹಸ್ತಾಂತರಿಸಲಾಗುತ್ತಿದೆ ಎಂದು ಸಚಿವರು ಹೇಳಿದರು.

ಸುಮಾರು 8.73 ಕೋಟಿ ವೆಚ್ಚದಲ್ಲಿ ಈ ಘಟಕವನ್ನು ಅಭಿವೃದ್ಧಿಪಡಿಸಲಾಗುತ್ತದೆ. ಘಟಕದಲ್ಲಿ ಮಿಶ್ರ ತ್ಯಾಜ್ಯದಿಂದ ಹಸಿ ತ್ಯಾಜ್ಯವನ್ನು ಬೇರ್ಪಡಿಸಿ ಜೈವಿಕ ಗೊಬ್ಬರವಾಗಿ ಪರಿವರ್ತಿಸಲಾಗುತ್ತದೆ. ಒಣ ತ್ಯಾಜ್ಯವನ್ನು ಪುನರ್‌ಬಳಕೆ ಮಾಡಲಾಗುತ್ತದೆ. ಪುನರ್‌ಬಳಕೆ ಸಾಧ್ಯವಾಗದ ತ್ಯಾಜ್ಯವನ್ನು ಕೈಗಾರಿಕೆಗಳಿಗೆ ಇಂಧನ ರೂಪದಲ್ಲಿ ಶಕ್ತಿ ಉತ್ಪಾದನೆಗಾಗಿ ಕಳುಹಿಸಲಾಗುತ್ತದೆ ಎಂದು ತಿಳಿಸಿದರು.

ನಗರದಲ್ಲಿ ಪ್ರತಿದಿನ ಸುಮಾರು 75 ಟನ್ ತ್ಯಾಜ್ಯ ಸಂಗ್ರಹವಾಗುತ್ತಿದ್ದು, ಅದರ ಸಮರ್ಪಕ ವಿಲೇವಾರಿ ಕಾರ್ಯ ನಡೆಯುತ್ತಿದೆ. ತ್ಯಾಜ್ಯ ನಿರ್ವಹಣೆಯಲ್ಲಿ ಗದಗ ಜಿಲ್ಲೆ ರಾಜ್ಯದಲ್ಲಿ ಆರನೇ ಸ್ಥಾನದಲ್ಲಿದೆ ಎಂದು ಹೇಳಿದರು.

ಈ ಯೋಜನೆಯ ಕಾಮಗಾರಿಯನ್ನು ಆಗಸ್ಟ್ 15ರೊಳಗೆ ಪೂರ್ಣಗೊಳಿಸಿ ಉದ್ಘಾಟನೆ ಮಾಡುವ ಉದ್ದೇಶವಿದ್ದು, ಕಾಮಗಾರಿ ಗುಣಮಟ್ಟದಿಂದ ಪೂರ್ಣಗೊಳ್ಳಬೇಕು ಎಂದು ಸಚಿವರು ಸೂಚಿಸಿದರು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರ್ ಸಾಬ್ ಬಬರ್ಚಿ, ಪ್ರಭು ಬುರಬುರೆ, ಬಸವರಾಜ ಕಡೇಮನಿ, ನಗರಸಭೆ ಸದಸ್ಯರಾದ ಲಕ್ಷ್ಮೀ ಸಿದ್ದಮ್ಮನಹಳ್ಳಿ, ಶ್ರೀಮತಿ ಮುನಿಯಾರ, ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೊಟೂರ, ಉಪವಿಭಾಗಾಧಿಕಾರಿ ಗಂಗಪ್ಪ ಎಂ., ನಗರಸಭೆ ಪೌರಾಯುಕ್ತ ರಾಜಾರಾಮ ಪವಾರ್, ಪರಿಸರ ಅಧಿಕಾರಿ ಆನಂದ ಬದಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ನಿಡಗುಂದಿಯಲ್ಲಿ ಶ್ರೀ ವೀರಭದ್ರೇಶ್ವರ ದೇವಸ್ಥಾನದ ನೂತನ ಶಿಲಾ ಮಂದಿರಕ್ಕೆ ಇಂದು ಅಡಿಗಲ್ಲು

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ನರೇಗಲ್ಲ ಸಮೀಪದ ನಿಡಗುಂದಿ ಗ್ರಾಮದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ನೂತನ ಶಿಲಾ ಮಂದಿರದ ಅಡಿಗಲ್ಲು ಸಮಾರಂಭವು ಮಾರ್ಚ್ 16ರಂದು ಬೆಳಗ್ಗೆ 9.30ಕ್ಕೆ ಜರುಗಲಿದೆ.

ಬಾಳೆಹೊನ್ನೂರಿನ ಶ್ರೀಮದ್ ರಂಭಾಪೂರಿ ವೀರ ಸಿಂಹಾಸನಾಧೀಶ್ವರ ಜಗದ್ಗುರು ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಸಾನ್ನಿಧ್ಯ ವಹಿಸಿ ಶಿಲಾ ಮಂಟಪದ ಭೂಮಿ ಪೂಜೆ ನೆರವೇರಿಸಲಿದ್ದಾರೆ.



ಈ ಸಂದರ್ಭದಲ್ಲಿ ನರೇಗಲ್ಲ ಹಿರೇಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ನಿಡಗುಂದಿಕೊಪ್ಪ ಶಾಖಾ ಶಿವಯೋಗಮಂದಿರದ ಅಭಿನವ ಚನ್ನಬಸವ ಸ್ವಾಮೀಜಿ, ರೋಣ ಬೂದಿಶ್ವರ ಹಿರೇಮಠದ ಡಾ. ವಿಶ್ವನಾಥ ಸ್ವಾಮೀಜಿ ಸಮ್ಮುಖ ವಹಿಸಲಿದ್ದಾರೆ.

ಶಾಸಕ ಜಿ.ಎಸ್. ಪಾಟೀಲ, ಮಾಜಿ ಸಚಿವ ಕಳಕಪ್ಪ ಬಂಡಿ, ವಿ.ಪ ಸದಸ್ಯ ಎಸ್.ವಿ. ಸಂಕನೂರ, ವೀರೇಶ ಕೂಗುಮಠ, ಗದಗ ಜಿಲ್ಲಾ ಜಂಗಮ ಸಮಾಜದ ಅಧ್ಯಕ್ಷ ವಿ.ಕೆ. ಗುರುಮಠ, ಶಿವಾನಂದ ಮಠದ ಸೇರಿದಂತೆ ಹಲವರು ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ ಎಂದು ಟ್ರಸ್ಟ್ ಕಮಿಟಿ ಪ್ರಕಟಣೆಯಲ್ಲಿ ತಿಳಿಸಿದೆ.

### ಅನೇಕ ಜನಪರ ಯೋಜನೆಗಳಿಗೆ ಚಾಲನೆ, ಕೆ.ಎಚ್. ಪಾಟೀಲ ಪ್ರಶಸ್ತಿ ಪ್ರದಾನ

# ಕೆ.ಎಚ್. ಪಾಟೀಲರ 101ನೇ ಜಯಂತ್ಯುತ್ಸವಕ್ಕೆ ವೇದಿಕೆ ಸಜ್ಜು




■ ವಿಜಯಸಾಕ್ಷಿ ಸುದ್ದಿ, ಗದಗ

ಸಹಕಾರಿ ರಂಗದ ಭೀಷ್ಮ, ಮಾಜಿ ಸಚಿವ ದಿವಂಗತ ಕೆ.ಎಚ್. ಪಾಟೀಲರ 101ನೇ ಜಯಂತ್ಯುತ್ಸವದ ಸಂಭ್ರಮಕ್ಕೆ ಗದಗ-ಬೆಟಗೇರಿ ಅವಳಿ ನಗರ ಸಜ್ಜುಗೊಂಡಿದೆ.

ಸೋಮವಾರ (ಮಾ.16) ಬೆಳಗ್ಗೆ 10.30ಕ್ಕೆ ನಗರದ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಆಯೋಜಿಸಿರುವ ಬೃಹತ್ ಸಮಾರಂಭಕ್ಕೆ ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿವೆ.

ಜಯಂತಿ ಕಾರ್ಯಕ್ರಮ ಕೇವಲ ಆಚರಣೆಯಾಗಿ ಉಳಿಯದೆ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತರುವ ಜನಪರ ಯೋಜನೆಗಳ ಲೋಕಾರ್ಪಣೆಯ ವೇದಿಕೆಯಾಗಿ ರೂಪುಗೊಂಡಿದೆ.

**ಭರ್ಜರಿ ವೇದಿಕೆ ಸಿದ್ಧತೆ :** ಕಾರ್ಯಕ್ರಮ ನಡೆಯುವ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಬೃಹತ್ ಪೆಂಡಾಲ್ ಹಾಕಲಾಗಿದ್ದು, ಸಾವಿರಾರು ಜನರು ಕುಳಿತು ವೀಕ್ಷಿಸಲು ಆಸನಗಳ ವ್ಯವಸ್ಥೆ ಮಾಡಲಾಗಿದೆ. ವೇದಿಕೆಯನ್ನು ಹೂವುಗಳು ಹಾಗೂ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದ್ದು, ಕಾರ್ಯಕ್ರಮಕ್ಕೆ ಆಗಮಿಸುವ ಗಣ್ಯರು ಮತ್ತು ಸಾರ್ವಜನಿಕರನ್ನು ಸ್ವಾಗತಿಸಲು ಇಡೀ ಆವರಣ ಮದುವಣಗಿತ್ತಿಯಂತೆ ಕಂಗೊಳಿಸುತ್ತಿದೆ.

**ಸೇವಾ ಯೋಜನೆಗಳಿಗೆ ಚಾಲನೆ :** ಈ ಬಾರಿಯ ಜಯಂತಿಯಲ್ಲಿ ಹತ್ತಾರು ಜನಪರ ಯೋಜನೆಗಳಿಗೆ ಚಾಲನೆ ದೊರೆಯಲಿದೆ. ಕಾಟನ್ ಸೇಲ್ ಸೊಸೈಟಿಯ ಶತಮಾನೋತ್ಸವ ಕಟ್ಟಡ ಹಾಗೂ ರಾಜೇಶ್ವರಿ ವಿದ್ಯಾನಿಕೇತನದ ನೂತನ ಸಂಕೀರ್ಣವನ್ನು ಇಂಧನ ಸಚಿವ ಕೆ.ಜೆ. ಜಾರ್ಜ್ ಉದ್ಘಾಟಿಸಲಿದ್ದಾರೆ.

ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಕೆ.ಎಚ್. ಪಾಟೀಲ ಆಸ್ಪತ್ರೆಯಲ್ಲಿ 100 ಉಚಿತ ಕೀಲು ಬದಲಾವಣೆ ಶಸ್ತ್ರಚಿಕಿತ್ಸೆ, 12 ಕಿಡ್ನಿ ಕಸಿ ಹಾಗೂ 1000 ಮೋತಿಬಿಂದು ಶಸ್ತ್ರಚಿಕಿತ್ಸೆಗಳಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಲಿದ್ದಾರೆ. ವಿಶೇಷವಾಗಿ ಆಸ್ಪತ್ರೆಯಲ್ಲಿ ಜನಿಸುವ ಹೆಣ್ಣು ಮಗುವಿನ ಹೆರಿಗೆ ವೆಚ್ಚವನ್ನು ಸಂಪೂರ್ಣ ಉಚಿತಗೊಳಿಸಿರುವ ಘೋಷಣೆ ಈ ಜಯಂತಿಯ ಮಹತ್ವವನ್ನು ಹೆಚ್ಚಿಸಿದೆ.

**ಗಣ್ಯರ ದಂಡು:** ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ರೋಗಿಗಳ ಸಂಬಂಧಿಕರಿಗಾಗಿ ನಿರ್ಮಿಸಿರುವ 'ಬುತ್ತಿ' ಆಲಯವನ್ನು ಲೋಕಾರ್ಪಣೆಗೊಳಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಶಿಕ್ಷಣ ತಜ್ಞ ಪ್ರಭಾಕರ ಕೋರೆ ಅವರಿಗೆ 5 ಲಕ್ಷ ರೂ. ನಗದು ಬಹುಮಾನ ಒಳಗೊಂಡ 'ಕೆ.ಎಚ್. ಪಾಟೀಲ ಪ್ರಶಸ್ತಿ' ನೀಡಿ ಗೌರವಿಸಲಾಗುವುದು.

ಕಾನೂನು ಹಾಗೂ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ಐತಿಹಾಸಿಕ ಕಾರ್ಯಕ್ರಮಕ್ಕೆ ಜಿಲ್ಲೆಯ ಶಾಸಕರು, ಮಾಜಿ ಸಂಸದರು ಹಾಗೂ ಕೆ.ಎಚ್. ಪಾಟೀಲರ ನೂರಕ್ಕೂ ಹೆಚ್ಚು ಒಡನಾಡಿಗಳು ಆಗಮಿಸಲಿದ್ದು, ಗದಗ ನಗರದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ.

### ಶಾಸಕ ಡಾ.ಚಂದ್ರು ಲಮಾಣಿ ಹಸಿರು ನಿಶಾನೆ ತೋರಿಸಿ ಚಾಲನೆ

# ಲಕ್ಷ್ಮೇಶ್ವರ ಸಾರಿಗೆ ಘಟಕಕ್ಕೆ ಮತ್ತೆ 4 ನೂತನ ಬಸ್‌ಗಳು



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಸಾರಿಗೆ ಘಟಕಕ್ಕೆ ಸಾರಿಗೆ ಇಲಾಖೆಯಿಂದ ಮತ್ತೆ ನಾಲ್ಕು ನೂತನ ಬಸ್‌ಗಳು ಮಂಜೂರಾಗಿದ್ದು, ರವಿವಾರ ಶಾಸಕ ಡಾ.ಚಂದ್ರು ಲಮಾಣಿ ಪೂಜೆ ಸಲ್ಲಿಸಿ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ಲಕ್ಷ್ಮೇಶ್ವರ ಘಟಕದ ವತಿಯಿಂದ ರವಿವಾರದಿಂದಲೇ ನೂತನ ಬಸ್‌ಗಳು ಲಕ್ಷ್ಮೇಶ್ವರ-ಶ್ರೀ ಕ್ಷೇತ್ರ ಸಿಗಂದೂರು ಹಾಗೂ ಲಕ್ಷ್ಮೇಶ್ವರ-ದಾವಣಗೇರೆ ಮಾರ್ಗಗಳಲ್ಲಿ ನಿತ್ಯ ಸಂಚಾರ ನಡೆಸಲಿವೆ. ಈ ನಾಲ್ಕು ಬಸ್‌ಗಳಿಗೆ ಚಾಲನೆ ನೀಡಿದ ಶಾಸಕ ಡಾ.ಚಂದ್ರು ಲಮಾಣಿ ಮಾತನಾಡಿ, ಚೌಡೇಶ್ವರಿ ತಾಯಿ ದರ್ಶನಕ್ಕೆ ಈ ಭಾಗದ ಪ್ರಯಾಣಿಕರಿಗೆ ಇದು ಹೆಚ್ಚಿನ ಅನುಕೂಲವಾಗಲಿದೆ ಎಂದು ಹೇಳಿದರು.

> "ನೂತನ ಬಸ್‌ಗಳಿಂದ ಈ ಭಾಗದ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲವಾಗಲಿದ್ದು, ವಿಶೇಷವಾಗಿ ಸಿಗಂದೂರು ಚೌಡೇಶ್ವರಿ ದರ್ಶನಕ್ಕೆ ಹೋಗುವ ಭಕ್ತರಿಗೆ ಸೌಲಭ್ಯ ಹೆಚ್ಚಲಿದೆ."
> – **ಶಾಸಕ ಡಾ.ಚಂದ್ರು ಲಮಾಣಿ,** ಶಾಸಕ,

ಈ ಸಂದರ್ಭದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಾಗರಾಜ ಮಡಿವಾಳರ ಹಾಗೂ ಹಿರಿಯ ವಕೀಲ ಎಸ್.ಪಿ. ಬಳಿಗಾರ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಲಕ್ಷ್ಮೇಶ್ವರ ಸಾರಿಗೆ ಘಟಕಕ್ಕೆ ಇದುವರೆಗೆ ಸುಮಾರು 14 ನೂತನ ಬಸ್‌ಗಳನ್ನು ಒದಗಿಸಲಾಗಿದೆ. ಶಕ್ತಿ ಯೋಜನೆ ಜಾರಿಯಾದ ನಂತರ ಸಾರಿಗೆ ನಿಗಮ ಯಶಸ್ವಿಯಾಗಿ ಮುನ್ನಡೆಯುತ್ತಿದ್ದು, ಮಹಿಳೆಯರಿಗೆ ಹೆಚ್ಚು ಅನುಕೂಲವಾಗಿದೆ ಎಂದು ತಿಳಿಸಿದರು.

ಸರ್ಕಾರದ ಪಂಚಗ್ಯಾರಂಟಿ ಯೋಜನೆಗಳು ಜನತೆಗೆ ಹಲವು ರೀತಿಯಲ್ಲಿ ಪ್ರಯೋಜನಕಾರಿಯಾಗಿದ್ದು, ಆರ್ಥಿಕವಾಗಿಯೂ ಸಹ ನೆರವಾಗಿವೆ. ಈಗ ಮಂಜೂರಾದ ನಾಲ್ಕು ಬಸ್‌ಗಳಿಂದ ಪ್ರಯಾಣಿಕರಿಗೆ ಇನ್ನಷ್ಟು ಸೌಲಭ್ಯ ಸಿಗಲಿದೆ. ಜೊತೆಗೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಸಮರ್ಪಕ ಬಸ್‌ಸೌಲಭ್ಯ ಒದಗಿಸಲು ಇಲಾಖೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಬಿಜೆಪಿ ಶಿರಹಟ್ಟಿ ಮಂಡಲ ಅಧ್ಯಕ್ಷ ಸುನೀಲ್ ಮಹಾಂತಶೆಟ್ಟರ, ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರು, ವಾ.ಕ.ರ.ಸಾ.ಸ. ಗದಗ ವಿಭಾಗೀಯ ನಿಯಂತ್ರಣಾಧಿಕಾರಿ ಪರಶುರಾಮ ಗಡೇದ, ಲಕ್ಷ್ಮೇಶ್ವರ ಘಟಕ ವ್ಯವಸ್ಥಾಪಕಿ ಸವಿತಾ ಆದಿ, ಇಲಾಖೆಯ ನಿರ್ವಾಹಕರು, ಚಾಲಕರು, ಸಿಬ್ಬಂದಿ ಹಾಗೂ ಸಾರ್ವಜನಿಕರು ಹಾಜರಿದ್ದರು.

CONSUMER CONNECT INITIATIVE

# ದಿ.ಕೆ.ಎಚ್.ಪಾಟೀಲರ ಜನ್ಮದಿನ ಸಂಭ್ರಮ



## ಕೆ.ಎಚ್. ಪಾಟೀಲ ಆಸ್ಪತ್ರೆಯಲ್ಲಿ ಕೀಲು ಬದಲಾವಣೆ ಚಿಕಿತ್ಸೆ ಸೇರ್ಪಡೆ

# ಕೀಲು ಆರೋಗ್ಯದ ಸಂಜೀವಿನಿ




ಗದಗ ಜಿಲ್ಲೆಯ ಹುಲಕೋಟಿಯಲ್ಲಿರುವ ಆರ್‌ಎಂಎಸ್ (RMS) ಸಂಸ್ಥೆಯ ಕೆ.ಎಚ್. ಪಾಟೀಲ ಆಸ್ಪತ್ರೆ ಹಾಗೂ ಸಂಶೋಧನಾ ಸಂಸ್ಥೆಯು ಗ್ರಾಮೀಣ ಜನರ ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯವನ್ನು ಸುಧಾರಿಸುವಲ್ಲಿ ಕ್ರಾಂತಿಕಾರಕ ಹೆಜ್ಜೆ ಇಟ್ಟಿದೆ. ಮುಖ್ಯವಾಗಿ ಅಂಧತ್ವ ನಿವಾರಣೆ ಮತ್ತು ಮೂಳೆ–ಕೀಲು ಸಮಸ್ಯೆಗಳಿಗೆ ಅತ್ಯಾಧುನಿಕ ಚಿಕಿತ್ಸೆ ನೀಡುವ ಮೂಲಕ ಈ ಭಾಗದ ಸಾವಿರಾರು ರೋಗಿಗಳ ಬಾಳಿಗೆ ಆಶಾಕಿರಣವಾಗಿದೆ.

ಗ್ರಾಮೀಣ ಭಾಗದಲ್ಲಿ ಗುಣಮಟ್ಟದ ಆರೋಗ್ಯ ಸೇವೆ ನಗರ ಪ್ರದೇಶಗಳಿಗೆ ಹೋಲಿಸಿದರೆ ಗ್ರಾಮೀಣ ಭಾಗಗಳಲ್ಲಿ ಸುಸಜ್ಜಿತ ವೈದ್ಯಕೀಯ ಸೌಲಭ್ಯಗಳು ದೊರೆಯುವುದು ವಿರಳ. ಈ ಕೊರತೆಯನ್ನು ನೀಗಿಸುತ್ತಿರುವ ಕೆ.ಎಚ್. ಪಾಟೀಲ ಆಸ್ಪತ್ರೆಯು, ಸುತ್ತಮುತ್ತಲಿನ ಹಳ್ಳಿಗಳ ಜನರಿಗೆ ಅತ್ಯಂತ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಚಿಕಿತ್ಸೆ ನೀಡುವ ಮಹತ್ತರ ಧ್ಯೇಯವನ್ನು ಹೊಂದಿದೆ.

### ಕೀಲು ಸಮಸ್ಯೆ ಹಾಗೂ ಚಿಕಿತ್ಸೆ

ಇಂದಿನ ದಿನಗಳಲ್ಲಿ ಅನೇಕರು ಕೀಲು ನೋವಿನಿಂದಾಗಿ ದೈನಂದಿನ ಚಟುವಟಿಕೆಗಳನ್ನು ಮಾಡಲು ಅಸಮರ್ಥರಾಗುತ್ತಿದ್ದಾರೆ. ಇಂತಹವರಿಗೆ ಕೀಲು ಜೋಡಣೆ ಶಸ್ತ್ರಚಿಕಿತ್ಸೆ (Joint Replacement Surgery) ಹೊಸ ಚೈತನ್ಯ ನೀಡುತ್ತಿದೆ.

### ಸಮಸ್ಯೆ ಏಕೆ ಉಂಟಾಗುತ್ತದೆ?

ಸಾಮಾನ್ಯವಾಗಿ ವಯಸ್ಸಾದಂತೆ ಮೊಣಕಾಲಿನ ಕೀಲುಗಳಲ್ಲಿರುವ ಕಾರ್ಟಿಲೇಜ್ (Cartilage) ಎಂಬ ಮೃದುವಾದ ಪದರವು ಸವೆದು ಹೋಗುತ್ತದೆ. ಈ ಪದರವು ಮೂಳೆಗಳು ಪರಸ್ಪರ ಘರ್ಷಣೆಯಾಗದಂತೆ ತಡೆಯುತ್ತದೆ. ಇದು ಹಾನಿಗೊಳಗಾದಾಗ ತೀವ್ರವಾದ ನೋವು ಕಾಣಿಸಿಕೊಳ್ಳುತ್ತದೆ. ನಡೆಯಲು, ಕುಳಿತುಕೊಳ್ಳಲು ಅಥವಾ ಮೆಟ್ಟಿಲು ಹತ್ತಲು ತೊಂದರೆಯಾಗುತ್ತದೆ. ನೆಲದಿಂದ ಎದ್ದು ನಿಲ್ಲುವುದು ಕಷ್ಟಕರವಾಗುತ್ತದೆ.

**ಕಾರಣಗಳು:** ವಯೋಸಹಜ ಸವೆತ, ಅತಿಯಾದ ದೇಹದ ತೂಕ, ಹಳೆಯ ಗಾಯಗಳು, ಕೀಲುಗಳ ಮೇಲಿನ ನಿರಂತರ ಒತ್ತಡ ಮತ್ತು ವಂಶವಾಹಿ ಕಾರಣಗಳು. ಇದು ವಿಶೇಷವಾಗಿ ಮಹಿಳೆಯರಲ್ಲಿ ಹೆಚ್ಚು ಕಂಡುಬರುತ್ತದೆ.



**ವಿಶೇಷ ಪ್ರಕಟಣೆ**

ಶ್ರೀ ಕೆ.ಎಚ್. ಪಾಟೀಲರ 101ನೇ ಜನ್ಮದಿನೋತ್ಸವದ ಸ್ಮರಣಾರ್ಥವಾಗಿ, 16-03-2026 ರಿಂದ 16-03-2027ರವರೆಗಿನ ಒಂದು ವರ್ಷದ ಅವಧಿಯಲ್ಲಿ ಅರ್ಹ 100 ಜನ ರೋಗಿಗಳಿಗೆ ಉಚಿತ ಕೀಲು ಜೋಡಣೆ ಶಸ್ತ್ರಚಿಕಿತ್ಸೆ ನೀಡಲು ಯೋಜಿಸಲಾಗಿದೆ.

### ಕೀಲು ಜೋಡಣೆ ವೈದ್ಯರ ತಂಡ

1. ಡಾ.ಅರವಿಂದ.ಡಿ.ಪಾಟೀಲ
2. ಡಾ.ವೇಮನ್.ಆರ್.ಸಾವುಕಾರ
3. ಡಾ.ಭೀಮಸಿಂಗ ಸಮೋರೆಕರ
4. ಡಾ.ವಿನಾಯಕ ಪಂಚಗಾರ
5. ಡಾ.ರಾಚಪ್ಪ ಬೆಟಗೇರಿ

### ಚಿಕಿತ್ಸಾ ಹಂತಗಳು

ಆಸ್ಪತ್ರೆಯಲ್ಲಿ ರೋಗಿಯ ಸ್ಥಿತಿಯನ್ನು ಅವಲಂಬಿಸಿ ವಿವಿಧ ಹಂತದ ಚಿಕಿತ್ಸೆ ನೀಡಲಾಗುತ್ತದೆ. ತೂಕ ಇಳಿಕೆ ಮತ್ತು ವೈದ್ಯರ ಮಾರ್ಗದರ್ಶನದಲ್ಲಿ ನಿಯಮಿತ ವ್ಯಾಯಾಮ. ನೋವು ನಿವಾರಕ ಮತ್ತು ಉರಿಯೂತ ಕಡಿಮೆ ಮಾಡುವ ಚಿಕಿತ್ಸೆ. ಸ್ನಾಯುಗಳ ಬಲವರ್ಧನೆಗೆ ವಿಶೇಷ ವ್ಯಾಯಾಮಗಳು. ಮೇಲಿನ ಯಾವುದೇ ಚಿಕಿತ್ಸೆಗಳು ಫಲಕಾರಿಯಾಗದಿದ್ದಾಗ, ಹಾನಿಗೊಳಗಾದ ಕೀಲನ್ನು ತೆಗೆದು ಕೃತಕ ಕೀಲನ್ನು ಅಳವಡಿಸಲಾಗುತ್ತದೆ.

ಲೇಖನ: ನೂರಅಹ್ಮದ್ ಅ. ಮಕಾನದಾರ

### ವಿಶೇಷ ಸೇವಾ ಯೋಜನೆ

100 ಉಚಿತ ಶಸ್ತ್ರಚಿಕಿತ್ಸೆಗಳು 'ಜನಸೇವೆಯೇ ಜನಾರ್ದನ ಸೇವೆ' ಎಂಬ ತತ್ವದಡಿ ಕಾರ್ಯನಿರ್ವಹಿಸುತ್ತಿರುವ ಈ ಆಸ್ಪತ್ರೆಯು ಶ್ರೀ ಎಚ್.ಕೆ. ಪಾಟೀಲ ಹಾಗೂ ಶ್ರೀ ಡಿ.ಆರ್. ಪಾಟೀಲ ಅವರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದೆ. ಅತ್ಯಾಧುನಿಕ ತಂತ್ರಜ್ಞಾನ, ಪರಿಣಿತ ವೈದ್ಯರ ತಂಡ ಮತ್ತು ಕಾಳಜಿಯುಳ್ಳ ಸಿಬ್ಬಂದಿಯನ್ನು ಹೊಂದಿರುವ ಕೆ.ಎಚ್. ಪಾಟೀಲ ಆಸ್ಪತ್ರೆಯು ಇಂದು ಗ್ರಾಮೀಣ ಭಾಗದ ಹೆಮ್ಮೆಯ ವೈದ್ಯಕೀಯ ಸಂಸ್ಥೆಯಾಗಿ ಹೊರಹೊಮ್ಮಿದೆ.

## ನೇತ್ರ ರಕ್ಷಾ ಯೋಜನೆ: ಸಾವಿರಾರು ಜನರ ಬಾಳಿಗೆ ಬೆಳಕಾಗುವ ಜ್ಯೋತಿ

## ಡಾ.ಪ್ರಭಾಕರ್ ಕೋರೆ ಅವರಿಗೆ 'ಕೆ.ಎಚ್.ಪಾಟೀಲ ಪ್ರಶಸ್ತಿ' ಗೌರವ



ಸಹಕಾರ ರಂಗದ ಭೀಷ್ಮ ಎಂದೇ ಖ್ಯಾತರಾದ ದಿ.ಕೆ.ಎಚ್.ಪಾಟೀಲರ ಸ್ಮರಣಾರ್ಥ ನೀಡಲಾಗುವ ಪ್ರತಿಷ್ಠಿತ 'ಕೆ.ಎಚ್. ಪಾಟೀಲ ಪ್ರಶಸ್ತಿ'ಗೆ ಈ ಬಾರಿ ನಾಡಿನ ಧೀಮಂತ ವ್ಯಕ್ತಿ, ಶಿಕ್ಷಣ ಪ್ರೇಮಿ ಡಾ.ಪ್ರಭಾಕರ್ ಬಸವಪ್ರಭು ಕೋರೆ ಅವರು ಭಾಜನರಾಗಿದ್ದಾರೆ. ಶಿಕ್ಷಣ, ಸಹಕಾರ ಮತ್ತು ಸಮಾಜ ಸೇವಾ ಕ್ಷೇತ್ರದಲ್ಲಿ ಅವರು ಮಾಡಿರುವ ಅನನ್ಯ ಸಾಧನೆಯನ್ನು ಗುರುತಿಸಿ ಈ ಗೌರವವನ್ನು ಅರ್ಪಿಸಲಾಗುತ್ತಿದೆ.

**ಜನನ ಮತ್ತು ಹಿನ್ನೆಲೆ:** ಡಾ.ಪ್ರಭಾಕರ್ ಕೋರೆ ಅವರು 1947ರ ಆಗಸ್ಟ್ 1ರಂದು ಬೆಳಗಾವಿ ಜಿಲ್ಲೆಯ ಅಂಕಲಿಯಲ್ಲಿ ಜನಿಸಿದರು. ಅತ್ಯಂತ ವಿನಮ್ರ ಹಿನ್ನೆಲೆಯಿಂದ ಬಂದ ಇವರು, ಅದೇ ವಿನಯವನ್ನೇ ತಮ್ಮ ಜೀವನದ ಮೌಲ್ಯವನ್ನಾಗಿಸಿಕೊಂಡು ಬೆಳೆದವರು. ತಮ್ಮ ಪ್ರಯತ್ನಶೀಲ ಸ್ವಭಾವ ಮತ್ತು ದೂರದೃಷ್ಟಿಯಿಂದ ಇಂದು ನಾಡಿನ ಅನುಕರಣೀಯ ವ್ಯಕ್ತಿಯಾಗಿ ಹೊರಹೊಮ್ಮಿದ್ದಾರೆ.

**ಕೆಎಲ್‌ಇ ಸಂಸ್ಥೆಯ ಕಾಯಕಲ್ಪ:** ತಮ್ಮ 38ನೇ ವಯಸ್ಸಿನಲ್ಲಿ ಉತ್ತರ ಕರ್ನಾಟಕದ ಪ್ರಸಿದ್ಧ ಕೆಎಲ್‌ಇ (KLE) ಸಂಸ್ಥೆಯ ಕರ್ಣಧಾರತ್ವ ವಹಿಸಿಕೊಂಡಾಗ ಆ ಸಂಸ್ಥೆಯ ಅಡಿಯಲ್ಲಿ ಕೇವಲ 38 ಶಿಕ್ಷಣ ಸಂಸ್ಥೆಗಳಿದ್ದವು. ಆದರೆ, ಪ್ರಭಾಕರ್ ಕೋರೆ ಅವರ ದಣಿವರಿಯದ ಪರಿಶ್ರಮ ಮತ್ತು ಸಂಘಟನಾ ಚಾತುರ್ಯದಿಂದಾಗಿ ಇಂದು 317ಕ್ಕೆ ಏರಿದೆ. ಬೆಳಗಾವಿಯನ್ನು ಕರ್ನಾಟಕದ 'ತಕ್ಷಶಿಲೆ'ಯನ್ನಾಗಿ ಪರಿವರ್ತಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇಲ್ಲಿನ ಜೆಎನ್‌ಎಂಸಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಎಂಜಿನಿಯರಿಂಗ್ ಕಾಲೇಜುಗಳು ಇಂದು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿವೆ.

### ವೈವಿಧ್ಯಮಯ ಸಾಧನೆಗಳು

- **ಕೃಷಿ ಕ್ಷೇತ್ರ:** ರೈತರ ಏಳಿಗೆಗಾಗಿ ಕೃಷಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಿದ್ದಾರೆ. ಕಬ್ಬು ಬೆಳೆಗಾರರ ಹಿತರಕ್ಷಣೆಗಾಗಿ 'ಶಿವಶಕ್ತಿ ಶುಗರ್ಸ್' ಕಾರ್ಖಾನೆಯನ್ನು ಆರಂಭಿಸಿದ್ದಾರೆ.
- **ಆರ್ಥಿಕ ಕಲ್ಯಾಣ:** ಜನಸಾಮಾನ್ಯರ ಆರ್ಥಿಕ ಶೋಷಣೆಯನ್ನು ತಡೆಯಲು ಸೌಹಾರ್ದ ಸಹಕಾರ ಬ್ಯಾಂಕ್ ಹಾಗೂ ರಾಣಿ ಚನ್ನಮ್ಮ ಸಹಕಾರ ಬ್ಯಾಂಕುಗಳನ್ನು ಸ್ಥಾಪಿಸಿ ಆರ್ಥಿಕ ಕ್ರಾಂತಿಗೆ ನಾಂದಿ ಹಾಡಿದ್ದಾರೆ.
- **ನಾಡು-ನುಡಿ ಸೇವೆ:** ವಿಶ್ವ ಕನ್ನಡ ಸಮ್ಮೇಳನದ ಸ್ವಾಗತಾಧ್ಯಕ್ಷರಾಗಿ, ಗಡಿನಾಡಿನಲ್ಲಿ ಕನ್ನಡದ ಕಂಪು ಹರಡಲು ಸಾಹಿತ್ಯ ಸಮ್ಮೇಳನಗಳ ಸಂಘಟಕರಾಗಿ ನಾಡು-ನುಡಿಯ ಸೇವೆಯಲ್ಲಿ ಸದಾ ಮುಂಚೂಣಿಯಲ್ಲಿದ್ದಾರೆ.

### ಸಂದ ಗೌರವಗಳು

ಡಾ ಪ್ರಭಾಕರ್ ಕೋರೆ ಅವರ ಸಾಧನೆಯನ್ನು ಗುರುತಿಸಿ ಸರಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಅಲ್ಲದೆ, ದೇಶ-ವಿದೇಶಗಳ ಐದು ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಇವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಪುರಸ್ಕರಿಸಿವೆ. ಪದ್ಮ ಪ್ರಶಸ್ತಿ ಸೇರಿದಂತೆ ಅನೇಕ ಉನ್ನತ ಗೌರವಗಳು ಇವರ ಮುಡಿಗೇರಿವೆ.

### ಅಭಿನಂದನೆ

ತಮ್ಮ ಬದುಕನ್ನೇ ಶಿಕ್ಷಣ ಮತ್ತು ಸಮಾಜಕ್ಕೆ ಸಮರ್ಪಿಸಿದ ಡಾ.ಪ್ರಭಾಕರ್ ಕೋರೆ ಅವರಿಗೆ ಕೆ.ಎಚ್.ಪಾಟೀಲರ ಸ್ಮರಣೆಯ ಪ್ರಶಸ್ತಿಯನ್ನು ನೀಡಿ ಗೌರವಿಸಲು ನಾವು ಅತ್ಯಂತ ಹೆಮ್ಮೆ ಮತ್ತು ಸಂತಸಪಡುತ್ತೇವೆ ಎಂದು ಕೆ.ಎಚ್. ಪಾಟೀಲ ಪ್ರತಿಷ್ಠಾನದ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು ತಿಳಿಸಿದ್ದಾರೆ.

ಹುಲಕೋಟಿಯ ಆರ್‌ಎಂಎಸ್ (RMS) ಸಂಸ್ಥೆಯ ಕೆ.ಎಚ್.ಪಾಟೀಲ ಆಸ್ಪತ್ರೆ ಹಾಗೂ ಸಂಶೋಧನಾ ಸಂಸ್ಥೆಯು ಗದಗ ಪರಿಸರದ ನಾಗರಿಕರ ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯವನ್ನು ಕೇಂದ್ರವನ್ನಾಗಿ ಇಟ್ಟುಕೊಂಡು ಅನೇಕ ಯೋಜನೆಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಿದೆ. ಅವುಗಳಲ್ಲಿ 'ನೇತ್ರ ಚಿಕಿತ್ಸೆ' ಯೋಜನೆಯು ಅತ್ಯಂತ ಪ್ರಮುಖವಾದುದು.

'ಕಣ್ಣಿದ್ದರೆ ಲೋಕವನ್ನು ನೋಡಬಹುದು' ಎಂಬ ನುಡಿಯಂತೆ, ಪ್ರಕೃತಿ ನಿರ್ಮಿತ ಈ ಸುಂದರ ಲೋಕವನ್ನು ಸವಿಯಲು ಕಣ್ಣು ಅತ್ಯವಶ್ಯಕ. ಕಣ್ಣು ಮಾನವನ ಅತ್ಯಂತ ಅಮೂಲ್ಯ ಜ್ಞಾನೇಂದ್ರಿಯ. 'ದಾನಗಳಲ್ಲಿ ನೇತ್ರದಾನವೇ ಶ್ರೇಷ್ಠ' ಎಂಬ ಮಾತಿನಂತೆ, ಮಾನವ ದೇಹದ ಈ ಅತ್ಯಂತ ಸೂಕ್ಷ್ಮ ಇಂದ್ರಿಯದ ಕುರಿತು ಸಮಾಜದಲ್ಲಿ ಅರಿವು ಮೂಡಿಸುವುದು ಇಂದಿನ ತುರ್ತು ಅಗತ್ಯವಾಗಿದೆ.

**ಆಸ್ಪತ್ರೆಯ ಸೇವಾ ಹಸ್ತ:** ಜನ್ಮಜಾತ ದೋಷಗಳಿಂದ ಅಥವಾ ಅಪಘಾತಗಳಿಂದ ನೇತ್ರ ಸಂಬಂಧಿತ ಸಮಸ್ಯೆಗಳಿಂದ ಬಳಲುತ್ತಿರುವ ಅನೇಕರಿಗೆ ಗದಗ ಪರಿಸರದ ಕೆ.ಎಚ್.ಪಾಟೀಲ ಆಸ್ಪತ್ರೆಯು ಆಶಾಕಿರಣವಾಗಿದೆ. ಜನಸೇವೆಯೇ ಜನಾರ್ದನ ಸೇವೆ ಎಂದು ನಂಬಿದವರು ಕೆ.ಎಚ್.ಪಾಟೀಲರು. 'ನಿನ್ನಿಂದ ಜನಹಿತ ಸಾಧಿತವಾಗುವಂತಿದ್ದರೆ ದೇವರಿಗೂ ಅಂಜಬೇಡ' ಎಂಬ ಅವರ ಘೋಷವಾಕ್ಯದಂತೆ, ಶ್ರೀಸಾಮಾನ್ಯರ ಸೇವೆಯಲ್ಲಿಯೇ ಸರ್ವೋತ್ತಮನನ್ನು ಕಾಣುತ್ತಿರುವ ಶ್ರೀ ಎಚ್.ಕೆ.ಪಾಟೀಲ ಮತ್ತು ಶ್ರೀ ಡಿ.ಆರ್.ಪಾಟೀಲ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯ ಜರುಗುತ್ತಿದೆ. ಧಾರವಾಡದ ಪ್ರಸಿದ್ಧ ಡಾ.ಎಂ.ಎಂ.ಜೋಶಿ ಐ ಇನ್‌ಸ್ಟಿಟ್ಯೂಟ್‌ನ ನೇತ್ರತಜ್ಞ ವೈದ್ಯರ ತಂಡದ ಸಹಯೋಗದೊಂದಿಗೆ ಸಾವಿರಾರು ರೋಗಿಗಳ ಪಾಲಿಗೆ ಈ ಸಂಸ್ಥೆ ನಿಜವಾದ ಬೆಳಕಾಗಿದೆ.

**ಮನೆಯ ಬಾಗಿಲಿಗೇ ನೇತ್ರ ಚಿಕಿತ್ಸೆ:** ಕಣ್ಣಿನ ಸಮಸ್ಯೆಗಳಿಂದ ಬಳಲುತ್ತಿರುವ ರೋಗಿಗಳ ಮನೆಯ ಬಾಗಿಲಿಗೇ ನೇತ್ರ ಚಿಕಿತ್ಸೆಯ ಸೌಲಭ್ಯಗಳನ್ನು ಒದಗಿಸುತ್ತಿರುವುದು ಈ ಸಂಸ್ಥೆಯ ದಾಖಲಾರ್ಹ ಕಾರ್ಯವಾಗಿದೆ. ಆಸ್ಪತ್ರೆಯ ವಾಹನದ ಮೂಲಕ ತಜ್ಞ ವೈದ್ಯರ ತಂಡವು ಗ್ರಾಮ ಹಾಗೂ ವಾರ್ಡ್‌ಗಳಿಗೆ ತೆರಳಿ ರೋಗಿಗಳನ್ನು ಗುರುತಿಸಿ ನೇತ್ರ ಪರೀಕ್ಷೆ ಮಾಡುತ್ತದೆ. ಪರೀಕ್ಷೆಗೆ ಬಂದ ರೋಗಿಗಳಿಗೆ ಉಪಾಹಾರ ನೀಡಿ, ಅಗತ್ಯ ಪೂರಕ ಪರೀಕ್ಷೆಗಳನ್ನು ನಡೆಸಿ ಚಿಕಿತ್ಸೆಯ ಬಗ್ಗೆ ಮಾಹಿತಿ ನೀಡಲಾಗುತ್ತದೆ. ನಂತರ ಆಸ್ಪತ್ರೆ ವಾಹನದಲ್ಲೇ ಅವರನ್ನು ಮನೆಗೆ ತಲುಪಿಸಲಾಗುತ್ತದೆ. ನಿಗದಿತ ದಿನಾಂಕದಂದು ರೋಗಿಗಳನ್ನು ಆಸ್ಪತ್ರೆಗೆ ಕರೆತಂದು ಉಚಿತ ಶಸ್ತ್ರಚಿಕಿತ್ಸೆ ನಡೆಸಿ, ಕಣ್ಣಿನ ಆರೋಗ್ಯದ ಬಗ್ಗೆ ಅರಿವು ಮೂಡಿಸಿ ಪುನಃ ಅವರ ಮನೆಗೆ ಬಿಡಲಾಗುತ್ತದೆ. ವಿಶೇಷವೆಂದರೆ, ಈ ಸಂಪೂರ್ಣ ಪ್ರಕ್ರಿಯೆಗೆ ರೋಗಿಯಿಂದ ಯಾವುದೇ ಶುಲ್ಕವನ್ನು ಪಡೆಯಲಾಗುವುದಿಲ್ಲ. ಇದು ಸಂಪೂರ್ಣ ಉಚಿತ ಸೇವೆಯಾಗಿದೆ.




**1000 ರೋಗಿಗಳ ನೇತ್ರ ಚಿಕಿತ್ಸೆಯ ಗುರಿ**

ಸಹಕಾರ ಧುರೀಣ ಕೆ.ಎಚ್.ಪಾಟೀಲರ 101ನೇ ಜನ್ಮದಿನೋತ್ಸವದ ಅಂಗವಾಗಿ, 16.03.2026 ರಿಂದ 16.03.2027 ರವರೆಗೆ ಒಟ್ಟು 1000 ರೋಗಿಗಳಿಗೆ ನೇತ್ರ ಚಿಕಿತ್ಸೆ ನೀಡುವ ಬೃಹತ್ ಗುರಿಯನ್ನು ಸಂಸ್ಥೆ ಹಾಕಿಕೊಂಡಿದೆ. ಹಸಿದ ಒಡಲಿಗೆ ಬುತ್ತಿ ನೀಡುವಂತೆ, ಮಂದ ದೃಷ್ಟಿಯ ಬಾಳಿಗೆ ಬೆಳಕು ನೀಡುವ ಈ 'ನೇತ್ರ ರಕ್ಷಾ ಯೋಜನೆ'ಯು ಗದಗ ಜಿಲ್ಲೆಯ ಜನರಿಗೆ ನಿಜವಾದ ವರವಾಗಿದೆ.

ಲೇಖನ: ಪ್ರೊ.ರಮೇಶ್ ಕಲ್ಲನಗೌಡರ, ಗದಗ




### ಒಂದು ವರ್ಷದ ಸಾಧನೆಗಳ ಗುರಿ

- ವರ್ಷದಲ್ಲಿ 100 ಉಚಿತ ಕೀಲು ಬದಲಾವಣೆ ಶಸ್ತ್ರಚಿಕಿತ್ಸೆ (Joint Replacement) ಯೋಜನೆಗೆ ಚಾಲನೆ
- ವರ್ಷದಲ್ಲಿ 12 ಉಚಿತ ಕಿಡ್ನಿ ಕಸಿ ಶಸ್ತ್ರಚಿಕಿತ್ಸೆ (Kidney Transplantation) ಯೋಜನೆಗೆ ಚಾಲನೆ
- ಒಂದು ವರ್ಷದಲ್ಲಿ ಆಸ್ಪತ್ರೆಯಲ್ಲಿ ಹೆಣ್ಣು ಮಗು ಜನಿಸಿದರೆ ಹೆರಿಗೆ ವೆಚ್ಚ ಉಚಿತ ಯೋಜನೆಗೆ ಚಾ ಲನೆ
- ಒಂದು ವರ್ಷದಲ್ಲಿ 1000 ಉಚಿತ ಮೋತಿ ಬಿಂದು ಶಸ್ತ್ರಚಿಕಿತ್ಸೆಗೆ (Catract) ಚಾಲನೆ

## ಪುಟ್ಟ ರಾಜಕುಮಾರಿ



ಭಗವಂತನು ಈ ಅದ್ಭುತವಾದ ಬ್ರಹ್ಮಾಂಡವನ್ನು ಸೃಷ್ಟಿಸಿದನು. ಅವನ ಸೃಷ್ಟಿಯಲ್ಲಿ ಅತ್ಯಂತ ಅನನ್ಯವಾದ, ಸುಕೋಮಲವಾದ ಹಾಗೂ ವಜ್ರದಷ್ಟು ಕಠಿಣವಾದ ಶಕ್ತಿಯೆಂದರೆ ಅದು 'ಹೆಣ್ಣು'. ಹೆಣ್ಣು ತಾಳ್ಮೆ ಮತ್ತು ಸಹನೆಯ ಮೂರ್ತರೂಪವಾಗಿದ್ದು, ಭಗವಂತನ ಶ್ರೇಷ್ಠಕೃತಿಯಾಗಿದ್ದಾಳೆ.

ಬಾಹ್ಯವಾಗಿ ಸುಕೋಮಲ ಶರೀರವನ್ನು ಹೊಂದಿದ್ದರೂ, ಮಹಿಳೆಯು ಆಂತರಿಕವಾಗಿ ವಜ್ರಾದಪಿ ಕಠೋರಾಣಿ (ವಜ್ರಕ್ಕಿಂತಲೂ ಕಠಿಣ). ಅವಳ ಒಡಲಲ್ಲೇ ದೈವತ್ವ ಅಡಗಿದೆ ಮತ್ತು ಅವಳ ಮಡಿಲಲ್ಲೇ ಸಂಸ್ಕೃತಿಯು ವಿಕಸನಗೊಂಡಿದೆ.

ನಮ್ಮ ಶಾಸ್ತ್ರಗಳು ಹೆಣ್ಣನ್ನು ಹೀಗೆ ವರ್ಣಿಸುತ್ತವೆ, ಕಾರ್ಯೇಷು ದಾಸಿ, ಕರಣೇಷು ಮಂತ್ರಿ, ರೂಪೇಷು ಲಕ್ಷ್ಮೀ, ಭೋಜ್ಯೇಷು ಮಾತಾ, ಶಯನೇಷು ರಂಭಾ, ಕ್ಷಮಯಾ ಧರಿತ್ರಿ, ಷಡ್ಗುಣ ಸಂಪನ್ನಾ ಕುಲಧರ್ಮ ಪತ್ನಿ.

ವ ುನ ುಸ್ಮೃತಿಯ ುಲ್ಲಿಯ ುೂ ನಾರಿಯನ್ನು ಉನ್ನತವಾಗಿ ಕೊಂಡಾಡಲಾಗಿದೆ. ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ । ಯತ್ರೈತಾಸ್ತು ನ ಪೂಜ್ಯಂತೇ ಸರ್ವಾಸ್ತತ್ರಾಫಲಾಃ ಕ್ರಿಯಾಃ

ಅಂದರೆ, ಎಲ್ಲಿ ಸ್ತ್ರೀಯರಿಗೆ ಗೌರವ-ಸನ್ಮಾನಗಳು ದೊರೆಯುತ್ತವೆಯೋ, ಅಲ್ಲಿ ದೇವತೆಗಳು ಪ್ರಸನ್ನರಾಗುತ್ತಾರೆ. ಯಾವ ಮನೆಯಲ್ಲಿ ಸ್ತ್ರೀಯರು ಗೌರವಿಸಲ್ಪಡುವುದಿಲ್ಲವೋ, ಅಲ್ಲಿ ಮಾಡುವ ಎಲ್ಲ ಯಜ್ಞ-ಪೂಜೆಗಳು ನಿಷ್ಫಲವಾಗುತ್ತವೆ.

ಶಾರೀರಿಕವಾಗಿಯೂ ಹೆಣ್ಣು ಅದ್ಭುತ ಶಕ್ತಿಯುಳ್ಳವಳು. ಒಂಬತ್ತು ತಿಂಗಳು ಮಗುವನ್ನು ಗರ್ಭದಲ್ಲಿ ಧರಿಸಿ, ಸಾಕಿ-ಸಲುಹುವ ಅವಳ ತಾಯ್ತನದ ಸಿದ್ಧತೆಯು ಪರಮಾಶ್ಚರ್ಯವನ್ನುಂಟು ಮಾಡುತ್ತದೆ. ಅವಳ ಬಯಕೆಯ ಕಾಲದ ವರ್ಣನೆಯು ಕಲ್ಪನೆಗೂ ಮೀರಿದ್ದು. ಜಾನಪದ ಸಾಹಿತ್ಯದಲ್ಲಂತೂ ಈ ಕುರಿತು ಅದ್ಭುತ ವರ್ಣನೆಗಳಿವೆ. ಹೆರಿಗೆಯ ಅತೀವ ನೋವನ್ನುಂಡು ಮಗುವಿಗೆ ಜನ್ಮನೀಡುವ ಹೆಣ್ಣು, ಸೃಷ್ಟಿಗೆ ಸೆಡ್ಡು ಹೊಡೆಯುತ್ತಾ ತನ್ನ ಸರ್ವಸ್ವವನ್ನೂ ಮಗುವಿಗಾಗಿ ಸಮರ್ಪಿಸುತ್ತಾಳೆ. ತನ್ನ ನಿದ್ರೆ, ಸೌಂದರ್ಯ ಮತ್ತು ಸುಖವನ್ನೆಲ್ಲ ಮಗುವಿಗಾಗಿ ತ್ಯಾಗ ಮಾಡುತ್ತಾಳೆ. ತಾನು ಉಪವಾಸವಿದ್ದರೂ ಮಗುವನ್ನು ಉಣಿಸುತ್ತಾಳೆ. ಮಗುವಿನ ಬೆಳವಣಿಗೆ ಮತ್ತು ಸಾಧನೆಯಲ್ಲೇ ಅವಳು ಪರಮಾನಂದವನ್ನು ಕಾಣುತ್ತಾಳೆ. ಮಗುವಿಗೆ ಸಂಸ್ಕಾರವನ್ನು ನೀಡಲು ತನ್ನನ್ನು ತಾನು ಅರ್ಪಿಸಿಕೊಳ್ಳುತ್ತಾಳೆ.

ಹೆರುವ ಆನಂದ, ಬೆಳೆಸುವ ಕಷ್ಟ, ಅಹರ್ನಿಶಿ ದುಡಿಮೆ ಇವೆಲ್ಲವೂ ಅವಳ ಪಾಲಿಗೆ ಸಹಜ. ಪ್ರಸಂಗ ಬಂದಾಗ ಅವಳು 'ಸಿಂಹಿಣಿ'ಯೂ ಆಗಬಲ್ಲಳು. ಇಂತಹ ಸ್ತ್ರೀಯ ತ್ಯಾಗವನ್ನು ಅರ್ಥಮಾಡಿಕೊಳ್ಳುವ ಮನೆಯ ಹಿರಿಯರು, ಅವಳನ್ನು ಗೌರವಿಸುವ ಪತಿ ಮತ್ತು ತಾಯಿಯ ಕಷ್ಟವನ್ನು ಅರಿಯುವ ಮಕ್ಕಳು ದೊರೆತರೆ ಆಕೆಯ ಜೀವನ ಸಾರ್ಥಕವೆನಿಸುತ್ತದೆ.

ಹೆಣ್ಣುಮಗಳು ಶೌರ್ಯ ಮತ್ತು ಸಾಹಸದಲ್ಲೂ ಎಂದೂ ಹಿಂದೆ ಬಿದ್ದಿಲ್ಲ. ರಾಮಾಯಣ ಕಾಲದಲ್ಲಿ ಕೈಕೆಯಿಯು ದಶರಥನೊಂದಿಗೆ ಯುದ್ಧಭೂಮಿಯಲ್ಲಿ ಪಾಲ್ಗೊಂಡಿದ್ದಳು. ಇತಿಹಾಸದಲ್ಲಿ ರಜಿಯಾ ಸುಲ್ತಾನ್, ಕಿತ್ತೂರು ರಾಣಿ ಚೆನ್ನಮ್ಮ ಅವರಿಂದ ಹಿಡಿದು ಇಂದಿನ ಇಂದಿರಾ ಗಾಂಧಿಯವರವರೆಗೆ ಅನೇಕ ಶಕ್ತಿಶಾಲಿ ಮಹಿಳೆಯರನ್ನು ನಾವು ಕಾಣಬಹುದು. ಹೆಣ್ಣು ಸರ್ವಾಂಗ ಸುಂದರಿಯಷ್ಟೇ ಅಲ್ಲ, ಸರ್ವ ರಂಗಗಳಲ್ಲೂ ಸಮರ್ಥಳಾಗಿದ್ದಾಳೆ.

ಅವಳ ತ್ಯಾಗದ ಬಣ್ಣನೆ ಅಸಾಧ್ಯ. ಮನೆಮಂದಿಗೆಲ್ಲ ಉಣಿಸಿ-ತಣಿಸಿ ತಾನು ನೀರು ಕುಡಿದು ಮಲಗುವ ಆ ಮಾತೃತ್ವ ಅಸಾದೃಶ್ಯವಾದುದು. ಅವಳ ಪ್ರೀತಿ ಸಮುದ್ರದಂತೆ ವಿಶಾಲ, ಸಹನೆ ಗಗನ ಸದೃಶ. ಕೊಟ್ಟು ಮರಗುವುದು ಅವಳ ಸ್ವಭಾವವಲ್ಲ, ಕೊಟ್ಟು ಆನಂದಿಸುವುದು ಅವಳ ಸಹಜ ಗುಣ. ಕಿಸೀಕಾ ದರ್ದ್ ಮಿಲ್ ಸಕೇ ತೋ ಲೇ ಉಧಾರ್ (ಯಾರಾದರೂ ನೋವಿನಲ್ಲಿದ್ದರೆ ಅದನ್ನು ಹಂಚಿಕೋ) ಎಂಬಂತೆ, ಯಾರೇ ದುಃಖದಲ್ಲಿದ್ದರೂ ಅವಳು ಧಾವಿಸುತ್ತಾಳೆ. ನದಿಯಂತೆ ತಾನು ಹರಿಯುವ ಇಕ್ಕೆಲೆಗಳಲ್ಲೂ ಹಸಿರು ನಳನಳಿಸುವಂತೆ ಮಾಡುತ್ತಾಳೆ. ತಾನು ಬಿಸಿಲಿನಲ್ಲಿ ನಿಂತು ನೆರಳು ನೀಡುವ ಮರದಂತೆ, ಅವಳು ಫಲ-ಪುಷ್ಪಗಳನ್ನು ನೀಡುತ್ತಾಳೆ. ಅವಳ ನಿರಪೇಕ್ಷ ಬುದ್ಧಿಗೆ ಪ್ರಕೃತಿ ಮಾತ್ರ ಸಮನಾಗಬಲ್ಲಳು. ಅವಳು ಕರುಣೆಯ ಸಾಗರ.

ಆದುದರಿಂದ, ಹೆಣ್ಣುಮಗುವಿನ ಜನನವನ್ನು ಸಂಭ್ರಮಿಸಿ. ಹೆಣ್ಣು ಹುಟ್ಟಿದಾಗ ನಿರಾಶರಾಗಬೇಡಿ, ಇದು ನಮ್ಮ ದೌರ್ಭಾಗ್ಯ ಎಂದು ಹಳಹಳಿಸಬೇಡಿ. ಬದಲಿಗೆ, ಮನೆಯಲ್ಲಿ ಮಹಾಲಕ್ಷ್ಮಿಯೇ ಅವತರಿಸಿದ್ದಾಳೆಂದು ಹೆಮ್ಮೆ ಪಡಿ.

ಲೇಖನ: ಜೆ.ಕೆ. ಜಮಾದಾರ

## ಮೂತ್ರಪಿಂಡ ಕಸಿ ಕ್ಷೇತ್ರದಲ್ಲಿ ಅಭೂತಪೂರ್ವ ಸಾಧನೆ

# ಆರ್‌ಎಂಎಸ್ ಕೆ.ಎಚ್.ಪಾಟೀಲ ಆಸ್ಪತ್ರೆ

ಮಾನವೀಯ ಮೌಲ್ಯ ಹಾಗೂ ಆದರ್ಶಗಳನ್ನು ಹೊಂದಿರುವವರು ತಮಗೆ ಬಂದ ನೋವು ಅನ್ಯರಿಗೆ ಬರಬಾರದು ಎಂಬ ಉದಾತ್ತ ದಾರ್ಶನಿಕ ಗುಣ ಹೊಂದಿರುತ್ತಾರೆ. ಇಂತಹ ವ್ಯಕ್ತಿಗಳನ್ನು ಸಮಾಜ ಸದಾ ಕಾಲ ಗೌರವಿಸುತ್ತದೆ. ಅಂತಹ ಸ್ಮರಣೀಯರ ಸಾಲಿನಲ್ಲಿ, ಸದೃಢ ಹಾಗೂ ಆರೋಗ್ಯಪೂರ್ಣ ಸಮಾಜ ನಿರ್ಮಾಣದ ಕನಸು ಕಂಡು, ರಾಜಕೀಯ ಕ್ಷೇತ್ರದಲ್ಲಿ 'ನಾಯಕ ಹುಲಿ'ಯಂತೆ ಬದುಕಿ ಸಮಾಜಕ್ಕೆ ಬೆಳಕಾದವರು ದಿ.ಕೆ.ಎಚ್.ಪಾಟೀಲರು.



**ಹಿನ್ನೆಲೆ ಮತ್ತು ಸಂಕಲ್ಪ:** ಕೆ.ಎಚ್.ಪಾಟೀಲ ಅವರು ತಮ್ಮ ಜೀವನದ ಸಂಧ್ಯಾಕಾಲದಲ್ಲಿ ಮೂತ್ರಪಿಂಡದ ಕಾಯಿಲೆಯಿಂದ ದೈಹಿಕವಾಗಿ ಬಳಲಿದ್ದರು. ಆ ಸಮಯದಲ್ಲಿ ಇಂತಹ ಗಂಭೀರ ಕಾಯಿಲೆಗಳಿಗೆ ಬೃಹತ್ ನಗರಗಳ ಆಸ್ಪತ್ರೆಗಳಲ್ಲಿ ಮಾತ್ರ ಚಿಕಿತ್ಸೆ ದೊರೆಯುತ್ತಿತ್ತು. ಇಂದಿಗೂ ಸಹ ಮೂತ್ರಪಿಂಡ, ಯಕೃತ್ತು (ಲಿವರ್), ಶ್ವಾಸಕೋಶ ಹಾಗೂ ಹೃದಯ ಸಂಬಂಧಿ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯಲು ಸಾಮಾನ್ಯ ಜನರು ಮಹಾನಗರಗಳಿಗೆ ಹೋಗಬೇಕಾದ ಅನಿವಾರ್ಯತೆಯಿದೆ. ಆದರೆ, ಗಂಡು ಮೆಟ್ಟಿದ 'ಬೆಳವಲ' ನಾಡಿನ ಮಡಿಲಲ್ಲಿ ಎಲ್ಲವೂ ಸಾಧ್ಯ ಎಂದು ತೋರಿಸಿಕೊಟ್ಟವರು ಕೆ.ಎಚ್.ಪಾಟೀಲರು. ಹುಲಕೋಟಿಯನ್ನು ಕೇಂದ್ರವನ್ನಾಗಿ ಇಟ್ಟುಕೊಂಡು ಅವರು ನಿರ್ಮಿಸಿದ ಅನೇಕ ಸಂಸ್ಥೆಗಳಲ್ಲಿ 1994ರಿಂದ ಸೇವೆ ಸಲ್ಲಿಸುತ್ತಿರುವ 'ರೂರಲ್ ಮೆಡಿಕಲ್ ಸರ್ವಿಸ್ ಸೊಸೈಟಿಯ (RMSS) ಕೆ.ಎಚ್.ಪಾಟೀಲ ಆಸ್ಪತ್ರೆ ಹಾಗೂ ಸಂಶೋಧನಾ ಸಂಸ್ಥೆ' ಅತ್ಯಂತ ಪ್ರಮುಖವಾದುದು.

**ಜನಮುಖಿ ಬೆಳವಣಿಗೆ:** ಕೆ.ಎಚ್.ಪಾಟೀಲರ ಆದರ್ಶಗಳನ್ನು ಮೈಗೂಡಿಸಿಕೊಂಡಿರುವ ಶ್ರೀ ಎಚ್.ಕೆ.ಪಾಟೀಲ ಮತ್ತು ಶ್ರೀ ಡಿ.ಆರ್.ಪಾಟೀಲರ ಮಾರ್ಗದರ್ಶನದಲ್ಲಿ ಈ ಆಸ್ಪತ್ರೆಯು ಇಂದು ಜನಮುಖಿಯಾಗಿ ಬೆಳೆದಿದೆ. ನೂರಕ್ಕೂ ಹೆಚ್ಚು ಹಾಸಿಗೆಗಳ ಸುಸಜ್ಜಿತ ಸೌಲಭ್ಯ ಹೊಂದಿರುವ ಈ ಆಸ್ಪತ್ರೆ, ಕೋವಿಡ್ ಕಾಲಘಟ್ಟದಲ್ಲಿ ಹಾಗೂ ನಂತರವೂ ಅನೇಕ ರೋಗಿಗಳ ಬಾಳಿನಲ್ಲಿ ಭರವಸೆಯ ಮಂದಹಾಸ ಮೂಡಿಸಿದೆ.

**ಕಿಡ್ನಿ ಕಸಿಯಲ್ಲಿ ಹೊಸ ಅಧ್ಯಾಯ:** ಮಹಾನಗರಗಳಲ್ಲಿ ಮಾತ್ರ ಲಭ್ಯವಿದ್ದ 'ಮೂತ್ರಪಿಂಡ ಕಸಿ' (Kidney Transplant) ಶಸ್ತ್ರಚಿಕಿತ್ಸೆಯನ್ನು ಗ್ರಾಮೀಣ ಭಾಗದ ಈ ಆಸ್ಪತ್ರೆಯಲ್ಲಿ ಯಶಸ್ವಿಯಾಗಿ ಮಾಡುತ್ತಿರುವುದು ವೈದ್ಯಲೋಕವೇ ಬೆರಗಾಗುವಂತೆ ಮಾಡಿದೆ. ನುರಿತ ತಜ್ಞ ವೈದ್ಯರಾದ ಡಾ.ಅವಿನಾಶ ಒದುಗೌಡರ, ಡಾ.ಪವನಕುಮಾರ ಕೋಳಿವಾಡ, ಡಾ.ದೀಪಕ ಕುರಹಟ್ಟಿ, ಡಾ.ನಿಯಾಜ್, ಡಾ.ವಿಶಾಲ ಕಪ್ಪತ್ತನವರ ಹಾಗೂ ಡಾ.ವಂದನಾ ಕಾಂಬಳೆ ಅವರ ತಂಡವು ಕೇವಲ ಒಂದು ವರ್ಷದಲ್ಲಿ 14 ಕಿಡ್ನಿ ಕಸಿ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ಪೂರೈಸಿದೆ. ಈ ಮೂಲಕ ಕೆ.ಎಚ್.ಪಾಟೀಲರ ಕನಸನ್ನು ನನಸು ಮಾಡಿ, ಗ್ರಾಮೀಣ ಭಾರತದ ಆರೋಗ್ಯ ಕ್ಷೇತ್ರದಲ್ಲಿ ಹೊಸ ಅಧ್ಯಾಯವನ್ನು ಸೃಷ್ಟಿಸಿದೆ.

ಲೇಖನ: ಪ್ರೊ.ರಮೇಶ್ ಕಲ್ಲನಗೌಡರ, ಗದಗ

### ಆಸ್ಪತ್ರೆ ವಿಸ್ತರಣೆಗೆ ಭೂಮಿಪೂಜೆ



ಗದಗ ಜಿಲ್ಲೆಯ ರೂರಲ್ ಮೆಡಿಕಲ್ ಸರ್ವಿಸ್ ಸೊಸೈಟಿಯ ಕೆ.ಎಚ್.ಪಾಟೀಲ ಆಸ್ಪತ್ರೆಯು ಇಂದು 100 ಹಾಸಿಗೆಗಳ ಅತ್ಯಾಧುನಿಕ ಸೌಲಭ್ಯಗಳಿಂದ ಸಜ್ಜಾಗಿದೆ. ಆದರೆ, ಹೆಚ್ಚುತ್ತಿರುವ ರೋಗಿಗಳ ಸಂಖ್ಯೆ ಮತ್ತು ಚಿಕಿತ್ಸಾ ಒತ್ತಡದ ಹಿನ್ನೆಲೆಯಲ್ಲಿ ಆಸ್ಪತ್ರೆಯ ವಿಸ್ತರಣೆ ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ, ಹೆಚ್ಚಿನ ಸೌಲಭ್ಯ ಒದಗಿಸಲು ಆಸ್ಪತ್ರೆಯನ್ನು ವೈಜ್ಞಾನಿಕವಾಗಿ ಹಾಗೂ ಅತ್ಯಾಧುನಿಕವಾಗಿ ವಿಸ್ತರಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಕೆ.ಎಚ್.ಪಾಟೀಲರ 101ನೇ ಜನ್ಮದಿನಾಚರಣೆಯ ಅಂಗವಾಗಿ ಈ ವಿಸ್ತರಿತ ಕಟ್ಟಡದ ಭೂಮಿಪೂಜೆಯನ್ನು ನೆರವೇರಿಸಲಾಗುತ್ತಿದೆ.

CONSUMER CONNECT INITIATIVE

# ದಿ.ಕೆ.ಎಚ್.ಪಾಟೀಲರ ಜನ್ಮದಿನ ಸಂಭ್ರಮ



ಕೆ.ಎಚ್.ಪಾಟೀಲರದ್ದು ಹೋರಾಟ, ಸಂಘರ್ಷ ಹಾಗೂ ವೈವಿಧ್ಯತೆಗಳಿಂದ ಕೂಡಿದ ವರ್ಣರಂಜಿತ ಬದುಕು. ರೈತರ ಹಿತ ಕಾಯುವುದು ಮತ್ತು ಶೋಷಣೆ ಮುಕ್ತ ಸಮಾಜ ನಿರ್ಮಾಣ ಮಾಡುವುದು ಅವರ ಮುಖ್ಯ ಆಶಯವಾಗಿತ್ತು. ಆಡಳಿತದಲ್ಲಿ ನಿಪುಣರು, ಸಂಘಟನೆಯಲ್ಲಿ ಚತುರರು. ಸಚಿವರಾಗಿ ಮತ್ತು ಕೆಪಿಸಿಸಿ ಅಧ್ಯಕ್ಷರಾಗಿ ಸಾಬೀತುಪಡಿಸಿದವರು. ಅನ್ಯಾಯದ ವಿರುದ್ಧ ಹೋರಾಡಲು ಸದಾ ತುದಿಗಾಲಲ್ಲಿ ನಿಲ್ಲುತ್ತಿದ್ದ ಛಲದಂಕಮಲ್ಲದಂತೆ ಇದ್ದರು.

## ಸಮೃದ್ಧಿ ಕನಸುಗಾರ...

# ಕೆ.ಎಚ್.ಪಾಟೀಲರು

## ಸಹಕಾರಿ ಭೀಷ್ಮ, ಸಂಘಟನೆ ಚತುರ

ಶ್ರೀ ಕೆ.ಎಚ್.ಪಾಟೀಲರು ಕನ್ನಡ ನಾಡು ಕಂಡ ಅಪರೂಪದ ರಾಜಕಾರಣಿ. ಗದುಗಿನ ಶ್ರೀ ವೀರನಾರಾಯಣ ಸನ್ನಿಧಿಯ ಪಕ್ಕದ ಪುಟ್ಟ ಹಳ್ಳಿ ಹುಲಕೋಟಿಯಲ್ಲಿ ಜನಿಸಿ, ಗ್ರಾಮದ ಸರಪಂಚರಾಗಿ ಸಾರ್ವಜನಿಕ ಜೀವನ ಪ್ರವೇಶಿಸಿದರು. ಅವರು ಶಾಸಕ, ಸಚಿವ, 'ಸಹಕಾರಿ ಭೀಷ್ಮ'ರಾಗಿ ಬೆಳೆದರು. ಸಮಷ್ಟಿಯ ಹಿತಕ್ಕಾಗಿ ಅವರು ಮಾಡಿದ ಸಾಧನೆ ಅನನ್ಯ. ಅದಕ್ಕಾಗಿಯೇ ಅವರು ನಾಡು ಮೆಚ್ಚಿದ ಜನನಾಯಕರಾಗಿದ್ದಾರೆ.

ಕೆ.ಎಚ್.ಪಾಟೀಲ ಅವರದ್ದು ಹೋರಾಟ, ಸಂಘರ್ಷ ಹಾಗೂ ವೈವಿಧ್ಯತೆಗಳಿಂದ ಕೂಡಿದ ವರ್ಣರಂಜಿತ ಬದುಕು. 'ಮಾಡಬಲ್ಲವರು ಮಾಡುತ್ತಾರೆ, ಮಾಡಲರಿಯದವರು ಮಾತನಾಡುತ್ತಾರೆ' ಎಂಬ ಮಾತಿನಂತೆ, ಪಾಟೀಲರು ಮೊದಲನೇ ವರ್ಗಕ್ಕೆ ಸೇರಿದವರು. ಮನುಷ್ಯ ಎಷ್ಟರ ಮಟ್ಟಿಗೆ 'ಸರ್ವರ ಹಿತಕ್ಕಾಗಿ ದುಡಿಯುತ್ತಾನೋ ಅಷ್ಟರ ಮಟ್ಟಿಗೆ ಆತ ದೊಡ್ಡವನಾಗುತ್ತಾನೆ' ಎಂಬ ಸತ್ಯಕ್ಕೆ ಇವರ ಜೀವನವೇ ಸಾಕ್ಷಿ. ವಿರೋಧಿಗಳು ಸಹ ಬೆಕ್ಕಸಬೆರಗಾಗುವಂತೆ ಕೆಲಸ ಮಾಡಿದ ಅವರು, ಕೆಲಸದ ಹಾದಿಯಲ್ಲಿ ಎಂದು ಸೋತವರಲ್ಲ, ಬದಲಿಗೆ 'ಸೋಲನ್ನು ಸೋಲಿಸಿದ' ಧೀಮಂತರು.

ಪಾಟೀಲರು ಕೇವಲ ವ್ಯವಹಾರಿಕ ರಾಜಕಾರಣಿಯಾಗಿರಲಿಲ್ಲ, ಅವರೊಬ್ಬ ದಾರ್ಶನಿಕ ಧುರೀಣರಾಗಿ ದ್ದರು. ರೈತರ ಹಿತ ಕಾಯುವುದು ಮತ್ತು ಶೋಷಣೆ ಮುಕ್ತ ಸಮಾಜ ನಿರ್ಮಾಣ ಮಾಡುವುದು ಅವರ ಮುಖ್ಯ ಆಶಯವಾಗಿತ್ತು. ಏಷ್ಯಾ ಖಂಡದ ಸಹಕಾರ ಸಂಘಟನೆಯಾದ 'ಸಿಕೋಪಾ'ದ ಅಧ್ಯಕ್ಷಗಿರಿಯಂತಹ ದೊಡ್ಡ ಸ್ಥಾನಗಳೂ ಅವರ ವ್ಯಕ್ತಿತ್ವದ ಮುಂದೆ ಸಣ್ಣವೆನಿಸಿದವು. ಅವರು ಅಲಂಕರಿಸಿದ ಸ್ಥಾನಗಳೇ ಅವರಿಂದಾಗಿ ಗೌರವವನ್ನು ಪಡೆದವು.

**ಕೆ.ಎಚ್.ಪಾಟೀಲ ಅವರದ್ದು ಹೋರಾಟ, ಸಂಘರ್ಷ ಹಾಗೂ ವೈವಿಧ್ಯತೆಗಳಿಂದ ಕೂಡಿದ ವರ್ಣರಂಜಿತ ಬದುಕು.**

ಆದಿಯಿಂದ ಅಂತ್ಯದವರೆಗೂ ಅವರು ಅಪ್ಪಟ ಹಳ್ಳಿ ವ್ಯಕ್ತಿಯಾಗಿಯೇ ಉಳಿದರು. ಹಳ್ಳಿಗರ ನಿಷ್ಠುರತೆ, ಸತ್ಯಸಂಧತೆ, ಸರಳತೆ, ಧೈರ್ಯ ಮತ್ತು ಲಾಭ-ಹಾನಿಯ ಲೆಕ್ಕಾಚಾರ ಹಾಕದ ಮನೋಭಾವ ಅವರಲ್ಲಿ ಹಾಸುಹೊಕ್ಕಾಗಿದ್ದವು. 'ಭಯಗೊಂಡರೆ ಜಯವಿಲ್ಲ' ಎನ್ನುತ್ತಿದ್ದ ಅವರು, ಅಂಜುತ್ತಾ ಬದುಕುವುದಕ್ಕಿಂತ ಧೈರ್ಯದಿಂದ ಹೋರಾಡಿ ಬದುಕಬೇಕೆಂದು ನಂಬಿದ್ದರು. 'ಧೈರ್ಯವೊಂದಿದ್ದರೆ ದೇವರನ್ನು ಸಹ ಗೆಲ್ಲಬಹುದು' ಎಂದು ಅವರು ಹೇಳುತ್ತಿದ್ದರು.

ಕೆ.ಎಚ್.ಪಾಟೀಲರು ಆಡಳಿತದಲ್ಲಿ ನಿಪುಣರು, ಸಂಘಟನೆಯಲ್ಲಿ ಚತುರರು. ಸಚಿವರಾಗಿ ಮತ್ತು ಕೆಪಿಸಿಸಿ ಅಧ್ಯಕ್ಷರಾಗಿ ಇದನ್ನು ಸಾಬೀತು ಪಡಿಸಿದರು. ಅನ್ಯಾಯದ ವಿರುದ್ಧ ಹೋರಾಡಲು ಸದಾ ತುದಿಗಾಲಲ್ಲಿ ನಿಲ್ಲುತ್ತಿದ್ದ 'ಛಲದಂಕಮಲ್ಲ' ದಂತೆ ಇದ್ದವರು.

**ಜೀವನ ಮತ್ತು ಕುಟುಂಬ:** ಕೆ.ಎಚ್.ಪಾಟೀಲರು 16ನೇ ಮಾರ್ಚ್ 1925 ರಂದು ಜನಿಸಿದರು. ತಂದೆ ರಂಗನಗೌಡರು ಅನೇಕ ಸಹಕಾರಿ ಹಾಗೂ ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕಿದ ಸಮಾಜ ಸೇವಕರು. ತಾಯಿ ಶ್ರೀಮತಿ ನಿಂಗಮ್ಮ ಅವರು ಗೌಡಕಿ ಮನೆತನದವರಾದ ಇವರಿಗೆ ಇತರರಿಗೆ ನೆರವಾಗುವುದೇ ದೊಡ್ಡ ಸಿರಿತನವಾಗಿತ್ತು. ಶ್ರೀ ರಾಮಕೃಷ್ಣ ಪರಮಹಂಸರ ಪರಮಭಕ್ತರಾಗಿದ್ದ ಈ ಕುಟುಂಬವು ಗೋಂದಾವಲಿ ಶ್ರೀ ಬ್ರಹ್ಮಚೈತನ್ಯರ ಹಾಗೂ ಕೈಲಾಸ ಆಶ್ರಮದ ಶ್ರೀ ತಿರುಚ್ಚಿ ಮಹಾಸ್ವಾಮಿಗಳ ಅನುಯಾಯಿಗಳಾಗಿದ್ದರು.

ಇಂದು ಅವರ ಪುತ್ರ ಎಚ್.ಕೆ.ಪಾಟೀಲರು ನಾಡಿನ ಪ್ರತಿಭಾನ್ವಿತ ಜನನಾಯಕರಾಗಿದ್ದು, ಪ್ರಾಮಾಣಿಕತೆ ಮತ್ತು ದೂರದರ್ಶಿತ್ವದ ಮೂಲಕ ಚೆಲುವ ಕನ್ನಡ ನಾಡಿನ ಕನಸುಗಾರರಾಗಿ ಬೆಳೆಯುತ್ತಿದ್ದಾರೆ. ಇನ್ನೊಬ್ಬ ಪುತ್ರ ಪ್ರಲ್ಹಾದಗೌಡರು ಹಾಗೂ ಸೋದರ ಪುತ್ರ ಡಿ.ಆರ್.ಪಾಟೀಲರು (ಗದಗ ಸಹಕಾರಿ ಟೆಕ್ಸ್‌ಟೈಲ್ ಮಿಲ್ಲಿನ ಸ್ಥಾಪಕ ಚೇರಮನ್) ಸಹ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕೆ.ಎಚ್.ಪಾಟೀಲರ ಕೀರ್ತಿಗೆ ಗೌರವ ತರುವಂತಹ ಸದಸ್ಯರನ್ನು ಹೊಂದಿದ ಈ ಕುಟುಂಬ ನಿಜಕ್ಕೂ ಪುಣ್ಯವಂತವಾದುದು.

**ಸಹಕಾರ ತತ್ವ:** ಕೆ.ಎಚ್.ಪಾಟೀಲರು ಕಲಿತದ್ದು ಕಡಿಮೆ ಇರಬಹುದು, ಆದರೆ ಸಾಧಿಸಿದ್ದು ಅಪಾರ. ಪ್ರತಿಭೆ, ಆಡಳಿತ ಕೌಶಲ್ಯ ಮತ್ತು ಸಹಕಾರ ತತ್ವದಲ್ಲಿ ಅವರಿಗೆ ಸಾಟಿಯಾದವರಿಲ್ಲ. 'ರೈತ ಬೆಳೆದ ಬೆಳೆಗಳನ್ನು ನೇರವಾಗಿ ಮಾರಾಟವಾಗಬಾರದು, ಅದು ಸಂಸ್ಕರಣಗೊಂಡು ಗ್ರಾಹಕರಿಗೆ ತಲುಪಬೇಕು' ಎನ್ನುತ್ತಿದ್ದರು. ಅದನ್ನು ಕಾರ್ಯರೂಪಕ್ಕೆ ತಂದು ಇತಿಹಾಸ ಸೃಷ್ಟಿಸಿದರು. ಸಹಕಾರ ಕ್ಷೇತ್ರದಲ್ಲಿ ಅವರು ರಾಜಕೀಯವನ್ನು ಮರೆಯುತ್ತಿದ್ದರು, ಹಾಗಾಗಿಯೇ ಎಲ್ಲ ಪಕ್ಷದವರೂ ಅವರ ಸ್ನೇಹಿತರಾಗಿದ್ದರು. ಶೋಷಣೆ ಮುಕ್ತ, ಸ್ವಾವಲಂಬಿ ಸಮಾಜದ ಅವರ ಕನಸುಗಳು ಕೇವಲ ಮಾತಿಗಷ್ಟೇ ಸೀಮಿತವಾಗದೆ ಕೃತಿಯಲ್ಲಿ ಸಾಕಾರಗೊಂಡವು.

**-ಜಗನ್ನಾಥ ಜಮಾದಾರ**

### ಕರ್ನಾಟಕ ನಾಮಕರಣ

**ಬಾಲ್ಯದಿಂದಲೂ ಸಾಹಿತ್ಯಾಭಿಮಾನಿಯಾಗಿದ್ದ ಪಾಟೀಲರು, ಗದುಗಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಆ ಸಮ್ಮೇಳನದಲ್ಲಿ 'ರಾಜ್ಯದ ಹೆಸರು ಕರ್ನಾಟಕ ಎಂದಾಗಬೇಕು' ಎಂಬ ನಿರ್ಣಯ ಸ್ವೀಕರಿಸಲಾಯಿತು. ಮುಂದೆ 1973ರಲ್ಲಿ ದೇವರಾಜ ಅರಸು ಅವರ ಸಂಪುಟದಲ್ಲಿ ಸಚಿವರಾಗಿದ್ದ ಕೆ.ಎಚ್.ಪಾಟೀಲರೇ ವಿಧಾನ ಪರಿಷತ್ತಿನಲ್ಲಿ 'ಕರ್ನಾಟಕ' ನಾಮಕರಣ ಮಸೂದೆಯನ್ನು ಮಂಡಿಸಿದ್ದು ಒಂದು ಸವಿನೆನಪಿನ ಯೋಗಾಯೋಗ. 1969ರ ರಾಜಕೀಯ ಪರ್ವಕಾಲದಲ್ಲಿ ಇಂದಿರಾಗಾಂಧಿಯವರ ನಾಯಕತ್ವವನ್ನು ಬೆಂಬಲಿಸಿದ ಇವರು, 1972ರ ಚುನಾವಣೆ ನಂತರ ದೇವರಾಜ ಅರಸು ಸಂಪುಟದಲ್ಲಿ ಪ್ರಭಾವಿ ಸಚಿವರಾಗಿ ಹೊರಹೊಮ್ಮಿದರು.**

## ರೈತರಿಗಾಗಿ ಒಂದೇ ಸೂರಿನಡಿ ಕೃಷಿ ಪರಿಕರಗಳ ಲೋಕ

# ಅಗ್ರಿ ಸೂಪರ್ ಮಾರ್ಟ್

ಜಗತ್ತು ಇಂದು ಸಂಪೂರ್ಣವಾಗಿ ವೈಜ್ಞಾನಿಕತೆ ಮತ್ತು ಸರಳತೆಯತ್ತ ಮುಖ ಮಾಡಿದೆ. ಪ್ರತಿಯೊಂದು ವಸ್ತುವೂ ಹತ್ತಿರದಲ್ಲಿ ಅಥವಾ ಕೈಗೆಟಕುವ ದರದಲ್ಲಿ ಸಿಗಬೇಕೆಂಬ ಆಶಯ ಎಲ್ಲ ಕ್ಷೇತ್ರಗಳಿಗೂ ವ್ಯಾಪಿಸಿದೆ. ಇದಕ್ಕೆ ಕೃಷಿ ಕ್ಷೇತ್ರವೂ ಹೊರತಾಗಿಲ್ಲ. ದಿನಬಳಕೆ ವಸ್ತುಗಳು ಮತ್ತು ದಿನಸಿಗಳು ಒಂದೇ ಸೂರಿನಡಿ ದೊರೆಯುವ 'ಸೂಪರ್ ಮಾರ್ಕೆಟ್' ಪರಿಕಲ್ಪನೆ ಈಗ ಕೃಷಿ ಕ್ಷೇತ್ರಕ್ಕೂ ಕಾಲಿಟ್ಟಿದೆ.

ಗದಗ ಪರಿಸರದ ರೈತರಿಗಾಗಿ ಇಂತಹದ್ದೊಂದು ವಿಶಿಷ್ಟ ಪರಿಕಲ್ಪನೆಯನ್ನು ಸಾಕಾರಗೊಳಿಸುತ್ತಿರುವುದು ಗದುಗಿನ ಹೃದಯಭಾಗದಲ್ಲಿರುವ ಕಾಟನ್ ಸೇಲ್ ಸೊಸೈಟಿ (JCTM). 1917ರಲ್ಲಿ ಪ್ರಾರಂಭವಾದ ಈ ಸಂಘವು ಅಂದಿನಿಂದ ಇಂದಿನವರೆಗೂ ರೈತರ ಹಿತ ಕಾಯುವಲ್ಲಿ ನಿಷ್ಕಲ್ಮಶವಾಗಿ ಸೇವೆ ಸಲ್ಲಿಸುತ್ತಿದೆ. ಕೃಷಿ ಪರಿಕರಗಳು, ಬಿತ್ತನೆ ಬೀಜಗಳು, ರಸಗೊಬ್ಬರ ಹಾಗೂ ರೈತ ಉತ್ಪನ್ನಗಳನ್ನು ದಾಸ್ತಾನು ಮಾಡಲು ಕೆ.ಎಚ್.ಪಾಟೀಲರು 'ಲಕ್ಷ್ಮಿ ಮಂದಿರ'ಗಳೆಂದು ಕರೆದ ಗೋದಾಮುಗಳನ್ನು (Godowns) ಒದಗಿಸುವುದು ಮತ್ತು ಕಮಿಷನ್ ರಹಿತವಾಗಿ ರೈತರ ಉತ್ಪನ್ನಗಳನ್ನು ಯೋಗ್ಯ ಬೆಲೆಗೆ ಮಾರಾಟ ಮಾಡುವುದು ಈ ಸಂಸ್ಥೆಯ ಪ್ರಮುಖ ಉದ್ದೇಶವಾಗಿದೆ. ಈ ಎಲ್ಲ ಯಶಸ್ವಿ ಕಾರ್ಯಗಳ ಹಿಂದಿನ ಶಕ್ತಿ 'ರೈತಮಿತ್ರ' ಕೆ.ಎಚ್.ಪಾಟೀಲರು.

ಐಟಿಬಿಟಿ ಕ್ಷೇತ್ರಗಳಂತೆ ಕೃಷಿ ಕ್ಷೇತ್ರವೂ ಇಂದು ವೈಜ್ಞಾನಿಕತೆಯನ್ನು ವೇಗವಾಗಿ ಅಪ್ಪಿಕೊಳ್ಳುತ್ತಿದೆ. ಕಾಲಕ್ಕೆ ತಕ್ಕಂತೆ ಕೃಷಿಗೆ ಬೇಕಾದ ಎಲ್ಲ ಪರಿಕರಗಳು ಮತ್ತು ಪೂರಕ ವಸ್ತುಗಳು ರೈತರಿಗೆ ಒಂದೇ ಸ್ಥಳದಲ್ಲಿ, ಉತ್ತಮ ಬೆಲೆಯಲ್ಲಿ ದೊರೆಯುವಂತಾಗಬೇಕು ಎಂಬುದು ಶ್ರೀ ಎಚ್.ಕೆ.ಪಾಟೀಲ ಹಾಗೂ ಶ್ರೀ ಡಿ.ಆರ್.ಪಾಟೀಲ ಅವರ ಆಶಯವಾಗಿದೆ. ಇದರ ಸಾಕಾರ ರೂಪವೇ ಈ 'ಅಗ್ರಿ ಸೂಪರ್ ಮಾರ್ಟ್'. ಕೆ.ಎಚ್.ಪಾಟೀಲರು ಕಂಡ ಕನಸನ್ನು ಸಾಕಾರಗೊಳಿಸುವ ಮೂಲಕ, ಗದಗಿನ ರೈತರ ಬಾಳಿನಲ್ಲಿ ಹೊಸ ಬದಲಾವಣೆ ಅಧ್ಯಾಯಕ್ಕೆ ಈ 'ಅಗ್ರಿ ಸೂಪರ್ ಮಾರ್ಟ್' ಮುನ್ನುಡಿ ಬರೆಯಲಿದೆ.



### ಕಟ್ಟಡದ ವಿಶೇಷತೆಗಳು

- **ನಿರ್ಮಾಣ:** ದಿನಾಂಕ 30.07.2024 ರಂದು ಸಂಘದ ಆಡಳಿತ ಮಂಡಳಿಯು ಕಟ್ಟಡ ನಿರ್ಮಾಣಕ್ಕೆ ನಿರ್ಣಯ ಕೈಗೊಂಡಿತು. ದಿನಾಂಕ 26.12.2025 ರಂದು ಭೂಮಿಪೂಜೆ ನೆರವೇರಿಸಿ, ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಯಿತು.
- **ತಂತ್ರಜ್ಞಾನ:** ಈ ಕಟ್ಟಡವನ್ನು ಅತ್ಯಾಧುನಿಕ ಪಿಇಬಿ (PEB) ಸ್ಟ್ರಕ್ಚರ್ ಸಿಸ್ಟಮ್ ಅಡಿಯಲ್ಲಿ ನಿರ್ಮಿಸಲಾಗಿದೆ.
- **ವಿಸ್ತೀರ್ಣ:** ನೆಲಮಹಡಿ ಹಾಗೂ ಎರಡು ಮೇಲು ಮಹಡಿಗಳನ್ನು ಒಳಗೊಂಡ ಈ ಕಟ್ಟಡವು ಒಟ್ಟು 44,108 ಚದರ ಅಡಿ 'ಸೂಪರ್ ಬಿಲ್ಟ್-ಅಪ್' ಪ್ರದೇಶ ಹಾಗೂ 33,820 ಚದರ ಅಡಿ 'ಕಾರ್ಪೆಟ್' ಪ್ರದೇಶದ ವಿಶಾಲ ವ್ಯಾಪ್ತಿ ಹೊಂದಿದೆ.
- **ಸೌಲಭ್ಯಗಳು:** ಮೇಲಿನ ಮಹಡಿಗಳಿಗೆ ಹೋಗಲು ಲಿಫ್ಟ್ ವ್ಯವಸ್ಥೆ ಇದೆ. ಸುತ್ತಲೂ ವಿಶಾಲವಾದ ಪಾರ್ಕಿಂಗ್ ಜಾಗ ಇರುವುದರಿಂದ ಗ್ರಾಹಕರು ಮತ್ತು ರೈತರಿಗೆ ನೆಮ್ಮದಿಯಿಂದ ಬಂದು ಹೋಗಲು ಅನುಕೂಲಕರವಾಗಿದೆ.

# ಹಸಿದ ಹೊಟ್ಟೆಗೆ ಬುತ್ತಿಯ ನೆಮ್ಮದಿ

ಮನುಷ್ಯನ ಮೂಲ ಅವಶ್ಯಕತೆಗಳಲ್ಲಿ ಗಾಳಿ, ನೀರು ಮತ್ತು ಆಹಾರ ಬಹಳ ಮುಖ್ಯ. ಗಾಳಿ ಮತ್ತು ನೀರನ್ನು ಪ್ರಕೃತಿಯ ಮೂಲಕ ಪ್ರಯತ್ನಪೂರ್ವಕವಾಗಿ ಪಡೆಯಬಹುದು. ಆದರೆ ಆಹಾರವನ್ನು ದುಡಿಮೆಯಿಂದ ಮಾತ್ರ ಪಡೆಯಲು ಸಾಧ್ಯ. ಆದ್ದರಿಂದಲೇ ಆಹಾರ ಮತ್ತು ಆಹಾರ ಉತ್ಪನ್ನಗಳಿಗೆ ನಿರ್ದಿಷ್ಟ ಆರ್ಥಿಕ ಮೌಲ್ಯವಿದೆ. ವರ್ತಮಾನದ ಬದುಕಿನಲ್ಲಿ ಸಾರ್ವಜನಿಕವಾಗಿ ಆಹಾರವನ್ನು ಹಣದಿಂದ ಮಾತ್ರ ಕೊಂಡುಕೊಳ್ಳಲು ಸಾಧ್ಯ ಎಂಬಂತಾಗಿದೆ.

ಆದರೆ ಭಾರತೀಯ ಪರಂಪರೆಯನ್ನು ಸಿಂಹಾವಲೋಕನ ಮಾಡಿದರೆ, ದುಡಿಮೆಯಿಂದ ಸಂಗ್ರಹಿಸಿದ ಧಾನ್ಯ ಅಥವಾ ಸಂಪತ್ತನ್ನು ವಿನಿಯೋಗಿಸುವ ಮೂಲಕ 'ಅನ್ನ ದಾಸೋಹ' ಮಾಡುವುದು ನಮ್ಮ ಸಂಸ್ಕೃತಿಯ ಸಹಜ ಭಾಗವಾಗಿತ್ತು. 'ಹಸಿದವರಿಗೆ ಅನ್ನವೇ ದೇವರು', 'ಅನ್ನದೈವದ ಮುಂದೆ ಅನ್ಯ ದೈವವಿಲ್ಲ' ಎಂಬ ನಾಣ್ಣುಡಿಯಂತೆ, ನಮ್ಮ ದೇಶದಲ್ಲಿ ಉಣ್ಣದ ದೇವರಿಗಿಂತ ಉಣ್ಣುವ 'ನರನಾರಾಯಣ'ನಿಗೆ ಮೊದಲ ಆದ್ಯತೆ. ಪರಂಪರೆಯಿಂದ ನಡೆದು ಬಂದ ಇಂತಹ ಸತ್ಪಥವನ್ನು ನಮ್ಮ ಪೂರ್ವಜರು ಎಂದಿಗೂ ಮೀರಿದವರಲ್ಲ. 'ಹಸಿದು ಬಂದವನಿಗೆ ಅನ್ನವಿಕ್ಕದೆ ಮುಂದೆ ನಡೆಯಬೇಡ' ಎಂಬ ಆಶಯ ರಾಜಪ್ರಭುತ್ವದ ಕಾಲದಿಂದ ಇಂದಿನ ಪ್ರಜಾಪ್ರಭುತ್ವದವರೆಗೂ ನಿರಂತರವಾಗಿ ಮುನ್ನಡೆದಿದೆ.

**ಅನೇಕ ಕೈಗಾರಿಕೆಗಳ ಸ್ಥಾಪನೆ:** ಸಹಕಾರ ಕ್ಷೇತ್ರದ ಭೀಷ್ಮ ಕೆ.ಎಚ್.ಪಾಟೀಲರು ಗ್ರಾಮೀಣರ ಇಂತಹ ಸಾಂಸ್ಕೃತಿಕ ಗುಣಗಳನ್ನು ತಮ್ಮ ಅಂತರಂಗ-ಬಹಿರಂಗದಲ್ಲಿ ಅನ್ವಯಿಸಿಕೊಂಡು ಬಂದವರು. ತಮ್ಮ ಆಪ್ತತೆಯ ಪರಿಧಿಯೊಳಗೆ ಬರುವ ಪ್ರತಿಯೊಬ್ಬರನ್ನೂ ಸಮಭಾವದಿಂದ ಅಪ್ಪಿಕೊಳ್ಳುತ್ತಿದ್ದವರು. 'ನನ್ನ ಜನಗಳು ಹಸಿವಿನಿಂದ ನರಳಬಾರದು' ಎಂಬ ಸದಾಶಯ ಅವರದಾಗಿತ್ತು. ಗದಗ ಪರಿಸರದಾದ್ಯಂತ ಕೃಷಿಯಾಧಾರಿತ ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಿ, ಕೃಷಿಕ ಮತ್ತು ಕೃಷಿ ಕಾರ್ಮಿಕ ಇಬ್ಬರನ್ನೂ ಏಕಕಾಲಕ್ಕೆ ಎತ್ತಿಹಿಡಿದ ಏಕೈಕ ಜನನಾಯಕ ಕೆ.ಎಚ್.ಪಾಟೀಲರು. ಹುಲಕೋಟಿಯಿಂದ ಗದಗ-ಬೆಟಗೇರಿಯ ರಾಷ್ಟ್ರೀಯ ಹೆದ್ದಾರಿಯುದ್ದಕ್ಕೂ ಅವರು ನಿರ್ಮಿಸಿದ ಉದ್ದಿಮೆಗಳೇ ಇದಕ್ಕೆ ಸಾಕ್ಷಿ.

ಕನ್ನಡ ನಾಡು ಹೆಮ್ಮೆಪಡುವಂತಹ ವ್ಯಕ್ತಿತ್ವವುಳ್ಳ ಡಾ. ಎಚ್.ಕೆ.ಪಾಟೀಲ ಮತ್ತು ಡಿ.ಆರ್.ಪಾಟೀಲ ಸಹೋದರರು, ಕೆ.ಎಚ್. ಪಾಟೀಲರ ಇಂತಹ ಸಮಾಜಮುಖಿ ಚಿಂತನೆಗಳನ್ನು ಮಾದರಿಯಾಗಿ ಇಟ್ಟುಕೊಂಡು ಜನಸಮುದಾಯದ ಪ್ರೀತಿ-ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ.




### ಬುತ್ತಿ ಭವನ ಲೋಕಾರ್ಪಣೆ

ಗದಗ ಜಿಲ್ಲೆಯ ವೈದ್ಯಕೀಯ ಕ್ಷೇತ್ರದಲ್ಲಿ ಅಮೂಲಾಗ್ರ ಬದಲಾವಣೆಗೆ ನಾಂದಿ ಹಾಡಿರುವುದು ಗದಗ ಕೆ.ಎಚ್.ಪಾಟೀಲ ಸರಕಾರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (EMJT). ಈ ಸಂಸ್ಥೆಯು ಅಲ್ಪ ಅವಧಿಯಲ್ಲಿ ಅಗಾಧ ಉನ್ನತಿ ಹೊಂದಲು ಡಾ.ಎಚ್.ಕೆ.ಪಾಟೀಲ ಅವರ ದೂರದೃಷ್ಟಿ ಮತ್ತು ಸಂಕಲ್ಪವೇ ಕಾರಣ. ಗದಗ ಪರಿಸರದ ಬಹುಸಂಖ್ಯಾತ ರೋಗಿಗಳಿಗೆ ವರವಾಗಿರುವ ಈ ಆಸ್ಪತ್ರೆಯ ಅನತಿ ದೂರದಲ್ಲೇ 'ಬುತ್ತಿ' ಎಂಬ ದಾಸೋಹ ಭವನವನ್ನು ಡಾ.ಎಚ್.ಕೆ.ಪಾಟೀಲ ಅವರ ಮಾರ್ಗದರ್ಶನದಲ್ಲಿ ನಿರ್ಮಿಸಲಾಗಿದೆ. ಜಿಲ್ಲಾ ಆಸ್ಪತ್ರೆಗೆ ದೂರದ ಊರುಗಳಿಂದ ಬರುವ ಹೊರರೋಗಿಗಳು ಮತ್ತು ಅವರ ಬಂಧುಗಳಿಗೆ ಮಧ್ಯಾಹ್ನ ಉಚಿತವಾಗಿ ಊಟ ನೀಡಬೇಕೆಂಬುದು ಪಾಟೀಲ ಸಹೋದರರ ಉದ್ದೇಶವಾಗಿದೆ. ಈ ಆಶಯದ ಸಾಕಾರರೂಪವಾಗಿ 'ಬುತ್ತಿ ಭವನ' ಕೆ.ಎಚ್.ಪಾಟೀಲರ 101ನೇ ಜನ್ಮದಿನದ ಅಂಗವಾಗಿ ದಿನಾಂಕ 16.03.2026 ರಂದು ಲೋಕಾರ್ಪಣೆಯಾಗುತ್ತಿದೆ. ಇದು ಹಸಿದ ಅನೇಕ ಒಡಲುಗಳಿಗೆ ಶುಚಿ-ರುಚಿಯಾದ ಊಟ ನೀಡಲಿದೆ. ಈ ಕಾರ್ಯಕ್ಕೆ 'ಬುತ್ತಿ' ಎಂದು ನಾಮಕರಣ ಮಾಡಿರುವುದರ ಹಿಂದೆ ಒಂದು ಸದುದ್ದೇಶವಿದೆ. 'ಬುತ್ತಿ' ಎಂಬುದು ಮಾರಾಟದ ಸರಕಲ್ಲ; ಅದು ಆಪ್ತತೆ. ಇಲ್ಲಿ ಊಟಕ್ಕೆ ಬರುವ ಪ್ರತಿಯೊಬ್ಬರೂ 'ಇವರು ನಮ್ಮವರು' ಎಂಬ ಭಾವದೊಂದಿಗೆ, ಏಕೋಭಾವದಿಂದ ಅನ್ನವನ್ನು ಅಮೃತದಂತೆ ಸವಿಯಬೇಕೆಂಬುದೇ ಈ ಪರಿಕಲ್ಪನೆಯ ಹಿಂದಿರುವ ಆಶಯ.

## ಹುಲಕೋಟಿ ಗ್ರಾಮೀಣ ಪರಿಸರದ ರೈತರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ

# ಶ್ರೀ ರಾಜೇಶ್ವರಿ ವಿದ್ಯಾನಿಕೇತನ ಕೊಠಡಿಗಳ ಸಂಕೀರ್ಣ ಉದ್ಘಾಟನೆ

ಶಿಕ್ಷಣ, ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳ ಅಭಿವೃದ್ಧಿಯೇ ತಮ್ಮ ಜೀವಾಳವೆಂದು ಬದುಕಿದ ದಿ.ಕೆ.ಎಚ್.ಪಾಟೀಲರಿಗೆ ಒಂದು ದೊಡ್ಡ ಕನಸಿತ್ತು. ಹುಲಕೋಟಿಯ ಗ್ರಾಮೀಣ ಪರಿಸರದ ರೈತರ ಮಕ್ಕಳು ಇಂಗ್ಲಿಷ್ ಮಾಧ್ಯಮದಲ್ಲಿ ಓದಿ, ಪಟ್ಟಣದ ಮಕ್ಕಳೊಂದಿಗೆ ಸ್ಪರ್ಧಿಸಿ ಗೆಲ್ಲುವಂತಾಗಬೇಕು; ಅವರಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂಬುದೇ ಆ ಹಂಬಲ. ಈ ಹಂಬಲದ ಫಲವಾಗಿಯೇ 'ಶ್ರೀ ರಾಜೇಶ್ವರಿ ವಿದ್ಯಾನಿಕೇತನ'ದ ಬೀಜಾಂಕುರವಾಯಿತು.

ಸರಳ ಜೀವನ ಮತ್ತು ಉನ್ನತ ಚಿಂತನೆಯ ಸಾಕಾರಮೂರ್ತಿ ಸನ್ಮಾನ್ಯ ಶ್ರೀ ಡಿ.ಆರ್.ಪಾಟೀಲರ ಮನಸ್ಸು, ಬುದ್ಧಿ ಮತ್ತು ಹೃದಯಗಳ ಕನಸಿನಲ್ಲಿ ಈ ಸಂಸ್ಥೆಯು ಸಾಕಾರ ರೂಪ ಪಡೆಯಿತು. ಹಾಗಾಗಿಯೇ ಇದನ್ನು ಶ್ರೀ ಡಿ.ಆರ್.ಪಾಟೀಲರ 'ಬ್ರೇನ್ ಚೈಲ್ಡ್' ಎಂದೇ ಕರೆಯಲಾಗುತ್ತದೆ. 1983ರಲ್ಲಿ ಬೆಂಗಳೂರಿನ ರಾಜರಾಜೇಶ್ವರಿ ನಗರದ ಶ್ರೀ ಕೈಲಾಸ ಆಶ್ರಮದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ತಿರುಚ್ಚಿ ಮಹಾಸ್ವಾಮಿಗಳ ಕೃಪಾಶೀರ್ವಾದಗಳೊಂದಿಗೆ ಪ್ರಾರಂಭವಾದ ಈ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಸಮಾಜದ ಪ್ರಗತಿಗೆ ಕಂಕಣಬದ್ಧರಾದ ಶ್ರೀ ಡಿ.ಆರ್. ಪಾಟೀಲರಿಗೆ ಮಹಾರಾಷ್ಟ್ರದ ವಾರಣಾದ ದಿ.ತಾತ್ಯಾಸಾಹೇಬ ಕೋರೆಯವರ ವಸತಿ ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಣ ತಜ್ಞ ಶ್ರೀ ಎಸ್. ಮಹಾಬಳೇಶ್ವರವಾಲಾ ಅವರ ಸಂಪರ್ಕವಾಯಿತು. ಇವರಿಬ್ಬರ ಸಮರ್ಪಿತ ಭಾವ ಹಾಗೂ ಸತತ 15 ವರ್ಷಗಳ ಕಾಲ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ ದಿ.ಆರ್.ರಾಮಮೂರ್ತಿಯವರ ಪ್ರಾಮಾಣಿಕ ಸೇವೆ ಈ ಶಾಲೆಗೆ ವರದಾನವಾಯಿತು.

**ಲೇಖನ: ವಿ.ಕೆ.ಹೊನವಾಡ (ಕನ್ನಡ ಶಿಕ್ಷಕರು), ಶ್ರೀ ರಾಜೇಶ್ವರಿ ವಿದ್ಯಾನಿಕೇತನ, ಹುಲಕೋಟಿ.**



### ಶಿಕ್ಷಣದ ತತ್ವ ಚಿಂತನೆ

ಶಿಸ್ತು, ಸಂಯಮ ಮತ್ತು ಸ್ವಾವಲಂಬನೆಯ ಕೈಗನ್ನಡಿಯಾದ ಈ ಸಂಸ್ಥೆಯು ಮಹಾತ್ಮ ಗಾಂಧೀಜಿ, ಸ್ವಾಮಿ ವಿವೇಕಾನಂದ, ರವೀಂದ್ರನಾಥ ಟ್ಯಾಗೋರ್, ಶ್ರೀ ಅರವಿಂದರು ಹಾಗೂ ಜಿಡ್ಡು ಕೃಷ್ಣಮೂರ್ತಿಯವರ ಶಿಕ್ಷಣ ತತ್ವಗಳ ಸಾರವನ್ನು ಹೊಂದಿದೆ. ಲೌಕಿಕ ಶಿಕ್ಷಣದ ಜತೆಗೆ ಜೀವನ ಮೌಲ್ಯಗಳು, ಮಾನಸಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಶಿಕ್ಷಣವನ್ನು ಸನಾತನ ಸಂಸ್ಕೃತಿ ತಳಹದಿಯ ಮೇಲೆ ನೀಡಲಾಗುತ್ತಿದೆ. ಕಾರ್ಖಾನೆ ಕಾರ್ಮಿಕರ ಮಕ್ಕಳಿಗೆ ಹಾಗೂ ಆರ್‌ಟಿಇ (RTE) ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವ ಮೂಲಕ ಸಂಸ್ಥೆಯು 'ಜ್ಞಾನ ದಾಸೋಹ' ಮಾಡುತ್ತಿದೆ.

### ಸಂಸ್ಥೆಯ ಬೆಳವಣಿಗೆ ಮತ್ತು ಸೌಲಭ್ಯಗಳು

**ವಿದ್ಯಾರ್ಥಿ ಶಕ್ತಿ**

1983 ಜೂನ್ 13 ರಂದು ಕೇವಲ 44 ವಿದ್ಯಾರ್ಥಿಗಳೊಂದಿಗೆ ಪ್ರಾರಂಭವಾದ ಈ ಶಾಲೆಯಲ್ಲಿ ಇಂದು ಎಲ್‌ಕೆಜಿ ಯಿಂದ 10ನೇ ತರಗತಿಯವರೆಗೆ 1896 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ.

**ವಸತಿ ಸೌಲಭ್ಯ**

160 ವಿದ್ಯಾರ್ಥಿಗಳು ಶಾಲೆಯ ವಸತಿ ನಿಲಯದಲ್ಲಿದ್ದಾರೆ. ಇವರಿಗಾಗಿ 6 ವಸತಿ ನಿಲಯಗಳಿದ್ದು, ಮೇಲ್ವಿಚಾರಕರಿಗೂ ಅಲ್ಲಿಯೇ ವಸತಿ ಗೃಹಗಳಿವೆ. ವಿಶೇಷವೆಂದರೆ, ಶೇ.50ರಷ್ಟು ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿ ಕುಟುಂಬಗಳಿಗೆ ಉಚಿತ ವಸತಿ ಒದಗಿಸಲಾಗಿದೆ.

**ಆಹಾರ ಮತ್ತು ಶಿಸ್ತು**

ಮಕ್ಕಳಿಗೆ ಶುಚಿ-ರುಚಿ, ಸತ್ವಯುತವಾದ ಆಹಾರ ನೀಡಲಾಗುತ್ತಿದೆ. ವಿದ್ಯಾರ್ಥಿಗಳು ಶಿಕ್ಷಕರ ಮಾರ್ಗದರ್ಶನದಲ್ಲೇ ದೈನಂದಿನ ಅಭ್ಯಾಸ ನಡೆಸುತ್ತಾರೆ.

**ಸಾಧನೆ ಮತ್ತು ತಂತ್ರಜ್ಞಾನ**

ಶಾಲೆಯ ಸಿಬಿಎಸ್‌ಇ ಪರೀಕ್ಷಾ ಫಲಿತಾಂಶವು ಪ್ರತಿ ವರ್ಷ ಶೇ.100ರಷ್ಟು ಬರುತ್ತಿದ್ದು, ಜಿಲ್ಲೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. 36 ಎಕರೆ ಹಚ್ಚಹಸಿರಿನ ಆವರಣದಲ್ಲಿರುವ ಈ ಶಾಲೆಯು 70 ಸುಸಜ್ಜಿತ ಕಲಿಕಾ ಕೊಠಡಿಗಳು, ಸ್ಮಾರ್ಟ್ ಬೋರ್ಡ್, ಗ್ರಂಥಾಲಯ, ಗಣಕಯಂತ್ರ ಮತ್ತು 'ಅಟಲ್ ಥಿಂಕರಿಂಗ್' ಪ್ರಯೋಗಾಲಯಗಳನ್ನು ಹೊಂದಿದೆ. 81 ನುರಿತ ಶಿಕ್ಷಕರು ಮತ್ತು 45 ಶಿಕ್ಷಕೇತರ ಸಿಬ್ಬಂದಿ ಸೇವೆ ಸಲ್ಲಿಸುತ್ತಿದ್ದಾರೆ.

**ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು**

ಏಕಕಾಲಕ್ಕೆ 1500 ವಿದ್ಯಾರ್ಥಿಗಳು ಆಡಬಲ್ಲ ವಿಶಾಲ ಕ್ರೀಡಾಂಗಣ ಇಲ್ಲಿದೆ. ಪ್ರತಿ ಗುರುವಾರ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಮಕ್ಕಳ ಪ್ರತಿಭೆ ಅನಾವರಣಗೊಳಿಸಲಾಗುತ್ತದೆ. ಈ ಶಾಲೆಯ 350ಕ್ಕೂ ಹೆಚ್ಚು ಹಳೆಯ ವಿದ್ಯಾರ್ಥಿಗಳು ವಿದೇಶಗಳಲ್ಲಿ ಹಾಗೂ ಸಾವಿರಾರು ವಿದ್ಯಾರ್ಥಿಗಳು ದೇಶದ ವಿವಿಧ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿರುವುದು ಹೆಮ್ಮೆಯ ವಿಷಯ.

**ಯಶಸ್ಸಿನ ಪಥದಲ್ಲಿ**

ಶ್ರೀ ಕೈಲಾಸ ಆಶ್ರಮದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಜಯೇಂದ್ರಪುರಿ ಮಹಾಸ್ವಾಮಿಗಳ ಆಶೀರ್ವಾದದೊಂದಿಗೆ, ಸಚಿವ ಶ್ರೀ ಎಚ್.ಕೆ.ಪಾಟೀಲರು ಹಾಗೂ ಶ್ರೀ ಡಿ.ಆರ್.ಪಾಟೀಲರ ಮಾರ್ಗದರ್ಶನದಲ್ಲಿ ಈ ಸಂಸ್ಥೆ ಸಮೃದ್ಧವಾಗಿ ಬೆಳೆದಿದೆ. ಭಾರತದ 'ಮಿಸೈಲ್ ಮ್ಯಾನ್' ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಅವರ ಸಮ್ಮುಖದಲ್ಲಿ ಬೆಳ್ಳಿ ಹಬ್ಬವನ್ನು ಆಚರಿಸಿಕೊಂಡ ಈ ಶಾಲೆ ಈಗ 43 ವಸಂತಗಳನ್ನು ಪೂರೈಸಿದೆ. ಇಂದು ಮಾರ್ಚ್ 16 ರಂದು ದಿ.ಕೆ.ಎಚ್.ಪಾಟೀಲರ ಜನ್ಮದಿನದ ಸುಸಂದರ್ಭದಲ್ಲಿ ವೈಜ್ಞಾನಿಕ ದೃಷ್ಟಿಕೋನದಲ್ಲಿ ನಿರ್ಮಾಣವಾದ 16 ಅತ್ಯಾಧುನಿಕ ನೂತನ ಕಲಿಕಾ ಕೊಠಡಿಗಳ ಉದ್ಘಾಟನೆಯಾಗುತ್ತಿರುವುದು ನಾಡಿನ ಶಿಕ್ಷಣ ಪ್ರೇಮಿಗಳಿಗೆ ಸಂತಸ ತಂದಿದೆ.

ವನ್ಯಜೀವಿಗಳ ರಕ್ಷಣೆಗೆ ಅರಣ್ಯ ಇಲಾಖೆಯ ವಿಶೇಷ ಕ್ರಮ | ಪ್ರತಿ 15 ದಿನಕ್ಕೊಮ್ಮೆ ನೀರು ತುಂಬಿಸುವ ವ್ಯವಸ್ಥೆ

# ಕಪ್ಪತ್ತಗುಡ್ಡ ಕಾಡಿನಲ್ಲಿ ವನ್ಯಜೀವಿಗಳಿಗೆ ಜೀವಧಾರೆ!



"ಕಪ್ಪತ್ತಗುಡ್ಡ ಅರಣ್ಯ ಪ್ರದೇಶದಲ್ಲಿ ವನ್ಯಜೀವಿಗಳಿಗೆ ಕುಡಿಯುವ ನೀರಿಗಾಗಿ ನೀರಿನ ತೊಟ್ಟಿಗಳನ್ನು ನಿರ್ಮಿಸಲಾಗಿದೆ. ಪ್ರತಿ 15 ದಿನಕ್ಕೊಮ್ಮೆ ನೀರು ತುಂಬಿಸಲಾಗುತ್ತಿದೆ. ಅರಣ್ಯ ಬೆಂಕಿ ತಡೆಗಟ್ಟಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗಿದೆ. ಅರಣ್ಯ ಸಂರಕ್ಷಣೆಗೆ ಎಲ್ಲರೂ ಸಹಕಾರ ನೀಡಬೇಕು."

– **ರಾಮಪ್ಪ ಪೂಜಾರ,** ಶಿರಹಟ್ಟಿ ವಲಯ ಅರಣ್ಯಾಧಿಕಾರಿ



### ಅರಣ್ಯ ಇಲಾಖೆಯ ಕ್ರಮಗಳು

1) ಕಪ್ಪತ್ತಗುಡ್ಡ ಅರಣ್ಯ ಪ್ರದೇಶದಲ್ಲಿ 17ಕ್ಕೂ ಹೆಚ್ಚು ನೀರಿನ ತೊಟ್ಟಿಗಳು
2) ಪ್ರತಿ 15 ದಿನಕ್ಕೊಮ್ಮೆ ಟ್ಯಾಂಕರ್ ಮೂಲಕ ನೀರು ತುಂಬಿಕೆ
3) ಸಿಸಿ ಕ್ಯಾಮೆರಾದಲ್ಲಿ ಪ್ರಾಣಿಗಳ ಸಂಚಾರ ದಾಖಲಿಕೆ
4) ಅರಣ್ಯ ಬೆಂಕಿ ತಡೆಗೆ ಬೆಂಕಿ ರೇಖಾ ಪಥ ನಿರ್ಮಾಣ
5) ಗ್ರಾಮಸ್ಥರು, ಕುರಿಗಾಹಿಗಳಿಗೆ ಜಾಗೃತಿ

ಬೇಸಿಗೆಯ ತೀವ್ರ ಬಿಸಿಲಿಗೆ ಪರಿಹಾರವಾಗಿ ಶಿರಹಟ್ಟಿ ಅರಣ್ಯ ಇಲಾಖೆಯಿಂದ 17ಕ್ಕೂ ಹೆಚ್ಚು ನೀರಿನ ತೊಟ್ಟಿಗಳ ನಿರ್ಮಾಣ ಟ್ಯಾಂಕರ್ ಮೂಲಕ ನೀರು ತುಂಬಿಕೆ, ಅರಣ್ಯ ಬೆಂಕಿ ತಡೆಗೆ ಜಾಗೃತಿ

**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಶಿರಹಟ್ಟಿ ತಾಲೂಕು ವ್ಯಾಪ್ತಿಯಲ್ಲಿ ಬರುವ ಕಪ್ಪತ್ತಗುಡ್ಡದ ಸುಮಾರು 11 ಸಾವಿರ ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಬೇಸಿಗೆಯ ಬಿಸಿಲಿನಿಂದ ವನ್ಯಜೀವಿಗಳನ್ನು ರಕ್ಷಿಸಿ ಅವರ ದಾಹ ನೀಗಿಸಲು ಅರಣ್ಯ ಇಲಾಖೆ ವಿಶೇಷ ಕ್ರಮ ಕೈಗೊಂಡಿದೆ. ಶಿರಹಟ್ಟಿ ವಲಯ ಅರಣ್ಯ ಇಲಾಖೆಯಿಂದ 17ಕ್ಕೂ ಹೆಚ್ಚು ನೀರಿನ ತೊಟ್ಟಿಗಳನ್ನು ನಿರ್ಮಿಸಲಾಗಿದ್ದು, ಇದು ಕಾಡಿನ ಪ್ರಾಣಿಗಳಿಗೆ ವರವಾಗಿ ಪರಿಣಮಿಸಿದೆ.

ತಾಲೂಕಿನ ಕಡಕೋಳ, ಜಲ್ಲಿಗೇರಿ, ಮಜ್ಜೂರ, ಬನ್ನಿಕೊಪ್ಪ, ಹಡಗಲಿ, ರಣತೂರ ಸೇರಿದಂತೆ ವಿವಿಧ ಅರಣ್ಯ ಪ್ರದೇಶಗಳಲ್ಲಿ ನೀರಿನ ತೊಟ್ಟಿಗಳನ್ನು ನಿರ್ಮಿಸಲಾಗಿದೆ. ಬೇಸಿಗೆ ಮುನ್ನವೇ ತೊಟ್ಟಿಗಳನ್ನು ಸ್ವಚ್ಛಗೊಳಿಸಿ ಟ್ಯಾಂಕರ್‌ಗಳ ಮೂಲಕ ನೀರನ್ನು ತುಂಬಿಸಲಾಗುತ್ತಿದೆ. ಪ್ರತಿ 15 ದಿನಕ್ಕೊಮ್ಮೆ ತೊಟ್ಟಿಗಳನ್ನು ನೀರಿನಿಂದ ತುಂಬಿಸುವ ವ್ಯವಸ್ಥೆಯನ್ನು ಅರಣ್ಯ ಇಲಾಖೆ ಮಾಡಿದೆ.

ಈ ತೊಟ್ಟಿಗಳ ಬಳಿ ಪ್ರಾಣಿಗಳು ಬಂದು ನೀರನ್ನು ಕುಡಿಯುತ್ತಿರುವ ದೃಶ್ಯಗಳು ಸಿಸಿ ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಇರುವ ಕಾಡು ಪ್ರಾಣಿಗಳಿಗೆ ಈ ತೊಟ್ಟಿಗಳು ಬಹಳ ಸಹಕಾರಿಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದಲ್ಲದೆ ಬೇಸಿಗೆಯಲ್ಲಿ ಅರಣ್ಯ ಇಲಾಖೆ ಬೆಂಕಿ ತಡೆಗಟ್ಟಲು ಬೆಂಕಿ ರೇಖಾ ಪಥಗಳನ್ನು ನಿರ್ಮಿಸುವುದರ ಜೊತೆಗೆ ಅರಣ್ಯದ ಅಂಚಿನ ಗ್ರಾಮಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಕುರಿಗಾಹಿಗಳ ಹಟ್ಟಿಗಳಿಗೆ ಭೇಟಿ ನೀಡಿ ಬೆಂಕಿ ತಡೆಗಟ್ಟುವ ಕುರಿತು ಅರಿವು ಮೂಡಿಸಲಾಗುತ್ತಿದೆ. ರೈತರು ತಮ್ಮ ಬದುವುಗಳಲ್ಲಿ ಬೆಂಕಿ ಹಚ್ಚಿ ಹಾಗೆಯೇ ತೆರಳಬಾರದು ಎಂದು ಸಾರ್ವಜನಿಕರಲ್ಲಿ ಇಲಾಖೆ ಮನವಿ ಮಾಡುತ್ತಿದೆ.

ಈ ಬಾರಿ ಬೇಸಿಗೆಗೂ ಮುನ್ನವೇ ಮಧ್ಯಾಹ್ನದ ವೇಳೆ ಬಿರು ಬಿಸಿಲು ಆರಂಭವಾಗಿರುವುದರಿಂದ ವನ್ಯಜೀವಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಇಲಾಖೆ ಮುಂದಾಗಿದೆ. ಮುಂದಿನ ದಿನಗಳಲ್ಲಿ ಪ್ರಾಣಿಗಳ ಸಂಖ್ಯೆ ಗಮನಿಸಿ ಇನ್ನಷ್ಟು ನೀರಿನ ತೊಟ್ಟಿಗಳನ್ನು ನಿರ್ಮಿಸುವ ಗುರಿಯನ್ನೂ ಇಲಾಖೆ ಹೊಂದಿದೆ.

---

ಬೆಟಗೇರಿಯ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಶಿವಶರಣೆ ಮುಕ್ತಾ ತಾಯಿ ಅಮ್ಮನವರು ಅಭಿಮತ

# ಮಹಿಳೆ ಇಳೆಗೆ ಸಮಾನ, ಭೂಮಿ ತೂಕದವಳು ಸ್ತ್ರೀ



"ಮಹಿಳೆ ಸಮಾಜದ ಕಣ್ಣು, ಭೂಮಿತೂಕದವಳು. ಸ್ತ್ರೀಯರಿಗೆ ಗೌರವ ನೀಡಿದಾಗಲೇ ಸಮಾಜದ ಅಭಿವೃದ್ಧಿ ಸಾಧ್ಯ."

**– ಶಿವಶರಣೆ ಮುಕ್ತಾತಾಯಿ ಅಮ್ಮನವರು**

1) ಯುಗಾದಿ ಅಂಗವಾಗಿ ರಂಗೋಲಿ ಸ್ಪರ್ಧೆ
2) 20ಕ್ಕೂ ಹೆಚ್ಚು ಮಹಿಳೆಯರ ಭಾಗವಹಿಕೆ
3) ಶಂಕರ ಶಿವಾಲಯದಲ್ಲಿ ರುದ್ರಾಭಿಷೇಕ ಪೂಜೆ
4) ಮಹಿಳಾ ಸಂಘದ ಸದಸ್ಯರಿಂದ ಕಾರ್ಯಕ್ರಮ ಯಶಸ್ವಿ

**■ವಿಜಯಸಾಕ್ಷಿ ಸುದ್ದಿ, ಬೆಟಗೇರಿ**

ಶ್ರೀ ಶಂಕರ ಶಿವಾಚಾರ್ಯ ಕುರುಹಿನಶೆಟ್ಟಿ ಸಮುದಾಯ ಭವನ ಟ್ರಸ್ಟ್ (ರಿ) ಹಾಗೂ ಶ್ರೀ ಶಂಕರ ಶಿವಾಚಾರ್ಯ ಕುರುಹಿನಶೆಟ್ಟಿ ಮಹಿಳಾ ಸಂಘದ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಬೆಟಗೇರಿಯಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಶಿವಶರಣೆ ಮುಕ್ತಾತಾಯಿ ಅಮ್ಮನವರು ಆಶೀರ್ವಚನ ನೀಡಿ, ಮಹಿಳೆ ಸಮಾಜದ ಕಣ್ಣು, ಭೂಮಿ ತೂಕದವಳು ಹಾಗೂ ಕ್ಷಮೆಯ ಧರಿತ್ರಿ. ಸ್ತ್ರೀಯನ್ನು ಯಾವುದಕ್ಕೂ ಹೋಲಿಸಲು ಸಾಧ್ಯವಿಲ್ಲ. ಎಲ್ಲಿ ನಾರಿಯರನ್ನು ಪೂಜಿಸುತ್ತಾರೋ ಅಲ್ಲಿ ದೇವತೆಗಳು ವಾಸಿಸುತ್ತಾರೆ ಎಂದು ಅವರು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿಯೂ ತಮ್ಮ ಸಾಮರ್ಥ್ಯವನ್ನು ತೋರಿಸುತ್ತಿದ್ದು, ಆಧ್ಯಾತ್ಮಿಕ ಕ್ಷೇತ್ರದಲ್ಲೂ ಮುನ್ನಡೆಯುತ್ತಿದ್ದಾರೆ ಎಂದರು. ಒತ್ತಡದ ಬದುಕಿನಲ್ಲಿ ಮಹಿಳೆಯರಿಗೆ ಆಧ್ಯಾತ್ಮ, ಸತ್ಸಂಗ ಮತ್ತು ಧ್ಯಾನ ಅತ್ಯಂತ ಅಗತ್ಯ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಜಯಶ್ರೀ ಡಿ. ಹೆಬಸೂರ ಅವರು ಸನಾತನ ಸಂಸ್ಕೃತಿ ಹಾಗೂ ಯುಗಾದಿ ಹಬ್ಬದ ಮಹತ್ವವನ್ನು ವಿವರಿಸಿದರು. ಮಹಿಳೆಯರು ತಮ್ಮ ಮಕ್ಕಳಿಗೆ ಸಂಸ್ಕಾರ ಮತ್ತು ಸಂಸ್ಕೃತಿಯ ಪರಂಪರೆಯನ್ನು ತಿಳಿಸಿಕೊಡಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಜಯಾ ಬ. ಕಲ್ಮನಿ ಅವರು ಸಂಘಟನಾ ಶಕ್ತಿಯಿಂದ ಸಮಾಜದ ಅಭಿವೃದ್ಧಿ ಸಾಧ್ಯ ಎಂದು ಹೇಳಿದರು. ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಡಾ. ಡಿ.ಆರ್. ಪರಕಾಳಿ ಹಾಗೂ ಮಹಿಳಾ ಸಂಘದ ಪ್ರಧಾನ ಕಾರ್ಯದರ್ಶಿ ಡಾ. ಸುವರ್ಣ ಗುರುರಾಜ ಶೇಡಗಟಗಿ ಕಾರ್ಯಕ್ರಮದ ಕುರಿತು ಮಾತನಾಡಿದರು.

ಯುಗಾದಿ ಹಬ್ಬದ ಅಂಗವಾಗಿ ರಂಗೋಲಿ ಸ್ಪರ್ಧೆ ನಡೆಯಿತು. 20ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರುಗು ತಂದರು. ವಿವಿಧ ಗಣ್ಯರು ಹಾಗೂ ಮಹಿಳಾ ಸಂಘದ ಸದಸ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

---


# ಹಳೆಯ ಖಬರಸ್ಥಾನ ಸ್ವಚ್ಛತೆಗೆ ಅಖಿಲ ಕರ್ನಾಟಕ ಮುಸ್ಲಿಂ ಮಹಾಸಭಾ ಆಗ್ರಹ

**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಭೀಷ್ಮ ಕೆರೆಯ ಮಗ್ಗುಲಲ್ಲಿರುವ ಪವಿತ್ರ ಹಾಗೂ ಐತಿಹಾಸಿಕ ಹಳೆಯ ಖಬರಸ್ಥಾನದಲ್ಲಿ ಆರಂಭಿಸಲಾಗಿದ್ದ ಸ್ವಚ್ಛತಾ ಕಾರ್ಯ ಅರ್ಧಕ್ಕೆ ನಿಂತಿರುವುದು ಸಾರ್ವಜನಿಕರಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ.

ಖಬರ್‌ಸ್ಥಾನದಲ್ಲಿ ಬೆಳೆದಿದ್ದ ಗಿಡ-ಗಂಟಿಗಳನ್ನು ತೆರವುಗೊಳಿಸಿ ಸ್ವಚ್ಛಗೊಳಿಸುವ ಕಾರ್ಯ ಆರಂಭಿಸಿರುವುದು ಶ್ಲಾಘನೀಯವಾದರೂ, ಕಾರ್ಯವನ್ನು ಮಧ್ಯದಲ್ಲೇ ನಿಲ್ಲಿಸಿರುವುದರಿಂದ ಕತ್ತರಿಸಿದ ಮರದ ಬಡ್ಡಿಗಳು ಹಾಗೂ ಮುಳ್ಳಿನ ಕಂಟಿಗಳನ್ನು ಅಲ್ಲಲ್ಲಿಯೇ ರಾಶಿ ಹಾಕಲಾಗಿದೆ. ಇನ್ನೂ ವಿಷಾದಕರ ಸಂಗತಿಯೆಂದರೆ, ಕತ್ತರಿಸಿದ ಮರದ ಭಾರವಾದ ಕೊಂಬೆಗಳನ್ನು ಪವಿತ್ರ ಗೋರಿಗಳ (ಕಬರ್) ಮೇಲೆಯೇ ಬಿಟ್ಟಿರುವುದರಿಂದ ಸುಮಾರು 30ಕ್ಕೂ ಹೆಚ್ಚು ಗೋರಿಗಳು ಜಖಂಗೊಂಡಿದ್ದು, ಹಲವು ಗೋರಿಗಳು ಕಾಣದಂತಾಗಿವೆ ಎಂದು ಅಖಿಲ ಕರ್ನಾಟಕ ಮುಸ್ಲಿಂ ಮಹಾಸಭಾದ ಗದಗ





ಜಿಲ್ಲಾ ಅಧ್ಯಕ್ಷ ಜಾಫರ್ ಡಾಲಾಯತ ಆತಂಕ ವ್ಯಕ್ತಪಡಿಸಿದ್ದಾರೆ.

ಮುಸ್ಲಿಂ ಬಾಂಧವರ ಪವಿತ್ರ ಹಬ್ಬವಾದ ರಂಜಾನ್ ಸಮೀಪಿಸುತ್ತಿದ್ದು, ಈದ್ ಪ್ರಾರ್ಥನೆ ಬಳಿಕ ಜನರು ತಮ್ಮ ಪೂರ್ವಜರ ಗೋರಿಗಳಿಗೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸುವುದು ಸಂಪ್ರದಾಯವಾಗಿದೆ. ಆದರೆ ಗೋರಿಗಳ ಮೇಲೆಯೇ ಮರದ ಕೊಂಬೆಗಳು ಬಿದ್ದಿರುವುದರಿಂದ ಹಾಗೂ ಸ್ವಚ್ಛತೆ ಪೂರ್ಣವಾಗದಿರುವುದರಿಂದ ಭಕ್ತರಿಗೆ ತೊಂದರೆ ಉಂಟಾಗುವ ಸಾಧ್ಯತೆ ಇದೆ ಎಂದು ಅವರು ತಿಳಿಸಿದ್ದಾರೆ.

ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಕಾಮಗಾರಿಯ ಗುತ್ತಿಗೆದಾರರು ತಕ್ಷಣವೇ ಎಚ್ಚೆತ್ತುಕೊಂಡು, ಗೋರಿಗಳ ಮೇಲೆ ಬಿದ್ದಿರುವ ಮರದ ಕೊಂಬೆಗಳು ಹಾಗೂ ಕಸವನ್ನು ತೆರವುಗೊಳಿಸಿ, ರಂಜಾನ್ ಹಬ್ಬದೊಳಗಾಗಿ ಸಂಪೂರ್ಣ ಖಬರಸ್ಥಾನವನ್ನು ಸ್ವಚ್ಛಗೊಳಿಸಿ ಭಕ್ತರಿಗೆ ಪ್ರಾರ್ಥನೆ ಸಲ್ಲಿಸಲು ಅನುಕೂಲ ಮಾಡಿಕೊಡಬೇಕು ಎಂದು ಸಾರ್ವಜನಿಕರ ಪರವಾಗಿ ಜಾಫರ್ ಡಾಲಾಯತ ಮನವಿ ಮಾಡಿದ್ದಾರೆ.

---

# ಗದಗ ಜಿಲ್ಲೆಯಲ್ಲಿ "ಸಂವೇದನಾ-2" ರಕ್ತದಾನ ಶಿಬಿರ ಯಶಸ್ವಿ




**■ವಿಜಯಸಾಕ್ಷಿ ಸುದ್ದಿ, ಗದಗ**

"ಸಂವೇದನಾ-2" ಎಂಬ ಶಿರೋನಾಮೆಯಡಿ ನ್ಯಾಶನಲ್ ಇಂಟಿಗ್ರೇಟೆಡ್ ಫೋರಮ್ ಆಫ್ ಆರ್ಟಿಸ್ಟ್ ಆಂಡ್ ಆಕ್ಟಿವಿಸ್ಟ್ (NIFAA) ಅವರ ನೇತೃತ್ವದಲ್ಲಿ ಹಾಗೂ ನ್ಯಾಷನಲ್ ಇಂಟಿಗ್ರೇಟೆಡ್ ಮೆಡಿಕಲ್ ಅಸೋಸಿಯೇಷನ್ (NIMA) ಸಹಯೋಗದಲ್ಲಿ ದೇಶಾದ್ಯಂತ ಒಟ್ಟು 1055 ರಕ್ತದಾನ ಶಿಬಿರಗಳನ್ನು ಏರ್ಪಡಿಸಲಾಗಿತ್ತು.

ಈ ಮಹತ್ವದ ಅಭಿಯಾನದ ಭಾಗವಾಗಿ ಗದಗ ಜಿಲ್ಲೆಯಲ್ಲಿಯೂ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದ್ದು, ಈ ಶಿಬಿರದಲ್ಲಿ ಒಟ್ಟು 128 ಜನರು ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಿ ಶಿಬಿರವನ್ನು ಯಶಸ್ವಿಗೊಳಿಸಿದರು.

ಈ ಶಿಬಿರದ ಯಶಸ್ಸಿಗೆ ಕಾರಣೀಕರ್ತರಾದ NIMA ಗದಗ ಜಿಲ್ಲಾ ಘಟಕದ ಪರವಾಗಿ ಜಿಲ್ಲಾ ಅಧ್ಯಕ್ಷರು ಹಾಗೂ ರಾಜ್ಯ ಉಪಾಧ್ಯಕ್ಷರಾದ ಡಾ. ಜಯಕುಮಾರ ಶಿ. ಬ್ಯಾಳಿ, ಜಿಲ್ಲಾ ಕಾರ್ಯದರ್ಶಿ ಡಾ. ಬಸವರಾಜ ಚೆನ್ನಪ್ಪಗೌಡರ ಹಾಗೂ ಖಜಾಂಚಿ ಡಾ. ಗಿರೀಶ ಬಡಿಗೇರ ಅವರನ್ನು World Record of Excellence (England) ಹಾಗೂ NIFAA ವತಿಯಿಂದ ಅಭಿನಂದನಾ ಪತ್ರ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಎಲ್ಲಾ ರಕ್ತದಾತರು ಮತ್ತು ಸಹಯೋಗಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

## ನಿಧನ

### ನಾಗಪ್ಪ ಶೆಟ್ರು



ಲಕ್ಷ್ಮೇಶ್ವರ: ಸಮೀಪದ ಗೊಜನೂರ ಗ್ರಾಮದ ಬಣಜಿಗ ಸಮಾಜದ ಹಿರಿಯರಾದ ನಾಗಪ್ಪ (ಶೆಟ್ರು) ಚನ್ನಬಸಪ್ಪ (86) ಅವರು ಮಾ. 15 ರಂದು ಸೋಮವಾರ ನಿಧನ ಹೊಂದಿರುವರು.

ಮೃತರಿಗೆ ಪತ್ನಿ, ಐವರು ಪುತ್ರರು , ಪುತ್ರಿ ಹಾಗೂ ಅಪಾರ ಬಂಧು ಬಳಗವಿದೆ.

ಲಕ್ಷ್ಮೇಶ್ವರದ ಲಿಂಬಯ್ಯಸ್ವಾಮಿ ಪ್ರತಿಭಾ ಪ್ರತಿಷ್ಠಾನದ ಮೂಲಕ ದೇಹದಾನದ ವಾಗ್ದಾನ ಮಾಡಿದ್ದರು. ಈ ಹಿನ್ನಲೆಯಲ್ಲಿ ಸಂಜೆ ಗದಗ ಜಿಮ್ಸ್ ಆಸ್ಪತ್ರೆಗೆ ಕುಟುಂಬಸ್ಥರು ಮೃತರ ದೇಹ ಹಸ್ತಾಂತರಿಸಿ ಕಂಬನಿ ಮಿಡಿದರು.

---

ರೈತ ಹಿತ, ಗ್ರಾಮಾಭಿವೃದ್ಧಿ ಹಾಗೂ ಸಹಕಾರಿ ಚಳವಳಿಗೆ ಕೆ.ಎಚ್. ಪಾಟೀಲರ ಮಹತ್ತರ ಕೊಡುಗೆ : ಡಾ. ರಮೇಶ

# ಕೆ.ಎಚ್. ಪಾಟೀಲ ದತ್ತಿ ಉಪನ್ಯಾಸದಲ್ಲಿ ಅವರ ಸೇವೆಗಳ ಸ್ಮರಣೆ!

**■ವಿಜಯಸಾಕ್ಷಿ ಸುದ್ದಿ, ಗದಗ**

ಸಮಾಜದಲ್ಲಿರುವ ಪ್ರತಿಯೊಬ್ಬರೂ ಸಮಾನ ಅವಕಾಶಗಳನ್ನು ಪಡೆದುಕೊಂಡು ಬೆಳವಣಿಗೆಯನ್ನು ಹೊಂದುವ ದೃಷ್ಟಿಕೋನವನ್ನು ಹೊಂದಿದ್ದ ಕೆ.ಎಚ್. ಪಾಟೀಲರು ಅನೇಕ ಪೂರಕ ಸಂಪನ್ಮೂಲಗಳನ್ನು ಸೃಷ್ಟಿಸಿದರು. ರೈತರ ಹಿತ ಮತ್ತು ಗ್ರಾಮಾಭಿವೃದ್ಧಿಗೆ ಬಲ ತುಂಬಿದರು ಎಂದು ಪ್ರಾಚಾರ್ಯ ಡಾ. ರಮೇಶ ಕಲ್ಲನಗೌಡ ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ತೋಂಟದ ಸಿದ್ಧಲಿಂಗಶ್ರೀಗಳ ಕನ್ನಡ ಭವನದಲ್ಲಿ ಸಹಕಾರಿ ರಂಗದ ಭೀಷ್ಮ ಕೆ.ಎಚ್. ಪಾಟೀಲರ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೆ.ಎಚ್. ಪಾಟೀಲರು ಕೃಷಿ, ಸಹಕಾರಿ, ಶಿಕ್ಷಣ, ನೀರಾವರಿ ಹಾಗೂ ಅರಣ್ಯ ಕ್ಷೇತ್ರಗಳನ್ನು ಬಲಪಡಿಸುವ ಮೂಲಕ ಸಮಾಜೋನ್ನತಿಗೆ ವಿಶಿಷ್ಟ ಸೇವೆ ಸಲ್ಲಿಸಿದ್ದಾರೆ. ಸರಳತೆ ಮತ್ತು ನೇರ ನಡೆ-ನುಡಿಗಳು ಅವರ ವ್ಯಕ್ತಿತ್ವದ ಪ್ರಮುಖ ಲಕ್ಷಣಗಳಾಗಿದ್ದು, ಸಹಕಾರದ ತತ್ವದ ಮೂಲಕ ಗದುಗನ್ನು ಮಾದರಿಯನ್ನಾಗಿಸಿದರು ಎಂದು ಹೇಳಿದರು. ಜಿಲ್ಲಾ ಗ್ಯಾರಂಟಿ



ಸಮಿತಿ ಅಧ್ಯಕ್ಷ ಬಿ.ಬಿ. ಅಸೂಟಿ ಮಾತನಾಡಿ, ರಾಜಕೀಯ ವ್ಯವಸ್ಥೆಯಲ್ಲಿ ರಾಷ್ಟ್ರಮಟ್ಟದಲ್ಲಿ ಹೆಸರು ಗಳಿಸಿದ್ದ ಕೆ.ಎಚ್. ಪಾಟೀಲರು ಅನೇಕ ಜನೋಪಯೋಗಿ ಕಾರ್ಯಗಳ ಮೂಲಕ ತಮ್ಮ ಛಾಪು ಮೂಡಿಸಿದರು ಎಂದರು.

ವಿದ್ಯಾಧರ ದೊಡ್ಡಮನಿ ಮಾತನಾಡಿ, ಗಾಂಧಿ ಮತ್ತು ಅಂಬೇಡ್ಕರ ವಿಚಾರಧಾರೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಕೆ.ಎಚ್. ಪಾಟೀಲರು ಗದಗ ಪರಿಸರವನ್ನು ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಯಶಸ್ವಿಯಾಗಿದ್ದರು ಎಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, "ವ್ಯಕ್ತಿ ತನ್ನ ಕಾರ್ಯಗಳಿಂದಲೇ ದೀರ್ಘಕಾಲ ಬದುಕಬಲ್ಲನು. ಸಮಾಜದ ಉನ್ನತಿಗೆ ಮಾಡುವ ಕಾರ್ಯಗಳು ಇತಿಹಾಸವನ್ನು ಸೃಷ್ಟಿಸುತ್ತವೆ" ಎಂದು ಹೇಳಿದರು. ಈ ಸಂದರ್ಭದಲ್ಲಿ ಸಾಮಾಜಿಕ ಸೇವೆಗಾಗಿ ಬಿ.ಬಿ. ಅಸೂಟಿ ಅವರನ್ನು ಸನ್ಮಾನಿಸಲಾಯಿತು. ಬಸವರಾಜ ನೆಲಜೇರಿ ಹಾಗೂ ಕಸ್ತೂರಿ ಕಡಗದ ಅವರು ಕೆ.ಎಚ್. ಪಾಟೀಲರ ಕುರಿತು ಕವನ ವಾಚಿಸಿದರು. ಡಾ. ದತ್ತಪ್ರಸನ್ನ ಪಾಟೀಲ ನಿರೂಪಿಸಿದರು. ಕಿಶೋರಬಾಬು ನಾಗರಕಟ್ಟಿ ಸ್ವಾಗತಿಸಿದರು. ಸತೀಶ ಚನ್ನಪ್ಪಗೌಡ್ರ ವಂದಿಸಿದರು.

"ಅಜ್ಜ ಕೆ.ಎಚ್. ಪಾಟೀಲರು ಸಮಾಜದ ಅಭಿವೃದ್ಧಿಗಾಗಿ ಮಾಡಿದ ಕಾರ್ಯಗಳನ್ನು ಅರಿತು ಅದನ್ನು ಮುಂದುವರಿಸುವ ಜವಾಬ್ದಾರಿ ನಮ್ಮ ಮೇಲಿದೆ. ಇಂದಿನ ಯುವಕರು ಸಾಮಾಜಿಕ ಸೇವೆಯಲ್ಲಿ ತೊಡಗಿ ರಾಜಕೀಯ ಕ್ಷೇತ್ರದ ಶುದ್ಧೀಕರಣಕ್ಕೆ ಮುಂದಾಗಬೇಕು."

– **ಕೃಷ್ಣಗೌಡ ಪಾಟೀಲ,** ಗದಗ ಜಿಲ್ಲಾ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka